بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّی عَلٰی رَسُوْلِہِ الْکَرِیْمِ وَعَلٰی عَبْدِہِ الْمَسِیْحِ الْمَوْعُوْدِ

وَلَقَدۡ نَصَرَکُمُ اللّٰہُ بِبَدۡرٍ وَّاَنۡتُمۡ اَذِلَّۃٌ

ಕನ್ನಡ
# ಬದರ್
ವಾರ ಪತ್ರಿಕೆ
WEEKLY BADAR QADIAN KANNADA

ವರ್ಷ: 03

ಸಂಚಿಕೆ: 17

ವಾರ್ಷಿಕ ಶುಲ್ಕ ರೂ.575/–

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

28 ಏಪ್ರೆಲ್ 2022, 28 ಶಹಾದತ್ 1401 ತಬ್‌ಲೀಗ್ ಹಿಜರಿ ಶಮ್‌ಸಿ,
26 ರಮಝಾನ್ 1443 ಹಿಜರಿ ಖಮರಿ.

### ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰھُمَّ اَیِّدْ اِمَامَنَا بِرُوْحِ الْقُدُسِ
وَبَارِکْ لَنَا فِیْ عُمُرِہٖ وَاَمْرِہٖ

### ಅಲ್ಲಾಹನ ಉಪದೇಶ

كُلُوْا وَاشْرَبُوْا حَتّٰى يَتَبَيَّنَ لَكُمُ الْخَيْطُ الْاَبْيَضُ مِنَ الْخَيْطِ الْاَسْوَدِ مِنَ الْفَجْرِ ثُمَّ اَتِمُّوا الصِّيَامَ اِلَى الَّيْلِ

(ಅಲ್‌ಬಖರ : 188)

ಅಂದರೆ: ಪ್ರಭಾತದ ಬಿಳಿ ನೂಲು (ರಾತ್ರಿಯ) ಕಪ್ಪು ನೂಲಿನಿಂದ ಬೇರ್ಪಟ್ಟು ನಿಮಗೆ ಕಾಣುವ ತನಕ ನೀವು ತಿನ್ನಲೂ ಕುಡಿಯಲೂಬಹುದು. ಆ ಬಳಿಕ ರಾತ್ರಿಯಾಗುವ ವರೆಗೆ ನೀವು ವ್ರತವನ್ನು ಪೂರ್ಣಗೊಳಿಸಿರಿ.

### ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

#### ರಮಝಾನ್‌ನ ಮಹತ್ವ

1898) ಹಝ್ರತ್ ಅಬೂ ಹುರೈರ(ರ) ವರದಿ ಮಾಡುತ್ತಾರೆ ರಸೂಲುಲ್ಲಾಹ್(ಸ) ನುಡಿಯುತ್ತಾರೆ: ರಮಝಾನ್ ಬಂದಾಗ ಸ್ವರ್ಗದ ದ್ವಾರಗಳು ತೆರೆಯಲ್ಪಡುತ್ತವೆ.

(1899) ಹಝ್ರತ್ ಅಬೂ ಹುರೈರ(ರ) ವರದಿ ಮಾಡುತ್ತಾರೆ ರಸೂಲುಲ್ಲಾಹ್(ಸ) ನುಡಿಯುತ್ತಾರೆ: ರಮಝಾನ್‌ನ ಮಾಸ ಬಂದಾಗ, ಸ್ವರ್ಗದ ದ್ವಾರಗಳು ತೆರೆಯಲ್ಪಡುತ್ತವೆ ಮತ್ತು ನರಕದ ಬಾಗಿಲುಗಳು ಮುಚ್ಚಲ್ಪಡುತ್ತವೆ ಮತ್ತು ಶೈತಾನರನ್ನು ಸರಪಳಿಯಲ್ಲಿ ಬಂಧಿಸಲಾಗುತ್ತದೆ.

(1901) ಹಝ್ರತ್ ಅಬೂ ಹುರೈರ(ರ) ವರದಿ ಮಾಡುತ್ತಾರೆ ರಸೂಲುಲ್ಲಾಹ್(ಸ) ನುಡಿಯುತ್ತಾರೆ: ಯಾವ ವ್ಯಕ್ತಿ ಲೈಲತುಲ್ ಖದರ್‌ನಲ್ಲಿ ಪ್ರತಿಫಲದ ಉದ್ದೇಶದಿಂದ ಆರಾಧನೆಗೆ ನಿಲ್ಲುತ್ತಾನೋ, ಅವನ ಹಿಂದಿನ ಹಾಗೂ ಮುಂದಿನ ಪಾಪಗಳನ್ನು ಕ್ಷಮಿಸಲಾಗುವುದು ಮತ್ತು ಯಾರು ರಮಝಾನಿನ ಉಪವಾಸಗಳನ್ನು ಪ್ರತಿಫಲದ ಉದ್ದೇಶದಿಂದ ಇರಿಸುತ್ತಾನೋ ಅವನ ಎಲ್ಲಾ ಪಾಪಗಳನ್ನು ಕ್ಷಮಿಸಲಾಗುವುದು. **(ಸಹೀಹ್ ಬುಖಾರಿ, ಸಂಪುಟ 3, ಕಿತಾಬುಸ್ಸೌಮ್, 2008 ಖಾದಿಯಾನ್‌ನಲ್ಲಿ ಪ್ರಕಟಿತ)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800–103–2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ (ಶುಕ್ರವಾರ ರಜೆ)**

**MUSLIM TELEVISION AHMADIYYA INTERNATIONAL www.mta.tv**

**ಪ್ರೀತಿ ಎಲ್ಲರಲ್ಲೂ, ದ್ವೇಶವಿಲ್ಲ ಯಾರಲ್ಲೂ**

**ಅಲ್ಲಾಹನು ಸರ್ವಶಕ್ತನಾಗಿದ್ದಾನೆ, ಕ್ಷಯರೋಗಿಗೆ ಬೇಕಿದ್ದರೆ ಉಪವಾಸದ ಶಕ್ತಿಯನ್ನು ನೀಡಬಲ್ಲ**
**ಈ ಪವಿತ್ರ ಮಾಸದಲ್ಲಿ ನೀನು ನನ್ನನ್ನು ವಂಚಿತಗೊಳಿಸಬೇಡ ಎಂದು ಒರ್ವ ವ್ಯಕ್ತಿಯು ಪ್ರಾಮಾಣಿಕವಾಗಿ ಸರ್ವಶಕ್ತನಲ್ಲಿ ಕೇಳಿಕೊಂಡರೆ, ಅಲ್ಲಾಹನು ಅವನನ್ನು ವಂಚಿತಗೊಳಿಸುವುದಿಲ್ಲ.**

**ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

ಮನುಷ್ಯನು ತನ್ನ ಸಾಮರ್ಥ್ಯಕ್ಕನುಗುಣವಾಗಿ ಅಲ್ಲಾಹನ ಕರ್ತವ್ಯಗಳನ್ನು ನಿರ್ವಹಿಸುತ್ತಿರಬೇಕು. ಉಪವಾಸದ ಕುರಿತು, ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ನುಡಿಯುತ್ತಾನೆ: **ವಅನ್ ತಸೂಮು ಖೈರುಲ್ಲಕುಮ್** (ಅಲ್–ಬಖರ: 185) ಅಂದರೆ: ನೀವು ಉಪವಾಸವನ್ನು ಅನುಷ್ಠಿಸಿದರೆ ಅದು ನಿಮಗಾಗಿ ಬಹಳ ಅನುಗ್ರಹದಾಯಕವಾಗಿದೆ.

ಫಿದ್ಯ (ಓರ್ವ ನಿರ್ಗತಿಕನಿಗೆ ಆಹಾರ ನೀಡುವುದು) ಏಕೆ ವಿಧಿಸಲ್ಪಟ್ಟಿದೆಯೋ ಎಂದು ಒಮ್ಮೆ ನನ್ನ ಮನಸ್ಸಿಗೆ ಬಂದಿತು, ಆಗ ಅದು ತೌಫೀಖ್ ಪಡೆಯುವುದಕ್ಕೆ ಎಂದು ನನಗೆ ತಿಳಿಯಿತು, ಆದ್ದರಿಂದ ಆತನಿಗೆ ಉಪವಾಸ ಅನುಷ್ಠಾನಕ್ಕೆ ತೌಫೀಖ್ ಸಿಗುತ್ತದೆ. ಸರ್ವಶಕ್ತನಾದ ಅಲ್ಲಾಹನು ಮಾತ್ರ ತೌಫೀಖ್ ನೀಡುವವನಾಗಿದ್ದಾನೆ. ಅದೇ ರೀತಿ ಪ್ರತಿಯೊಂದು ವಸ್ತುವು ಅಲ್ಲಾಹನಿಂದಲೇ ಬಯಬೇಕು. ಅಲ್ಲಾಹನು ಸರ್ವಶಕ್ತನಾಗಿದ್ದಾನೆ, ಕ್ಷಯರೋಗಿಗೆ ಬೇಕಿದ್ದರೆ ಉಪವಾಸದ ಶಕ್ತಿಯನ್ನು ನೀಡಬಲ್ಲನು ಆದ್ದರಿಂದ ಫಿದ್ಯದ ಉದ್ದೇಶವು ಆ ಶಕ್ತಿಪಡೆಯುವುದಾಗಿದೆ ಮತ್ತೆ ಇದು ಅಲ್ಲಾಹನ ಅನುಗ್ರಹದಿಂದ ಸಾಧ್ಯವಾಗುತ್ತದೆ. ನನಗೆ ಖಾತ್ರಿ ಇರುವುದೇನೆಂದರೆ ಇದೊಂದು ನಿನ್ನ ಪವಿತ್ರ ಮಾಸವಾಗಿದೆ ಅದರಿಂದ ನಾನು ವಂಚಿತನಾಗುತ್ತಿದ್ದೇನೆ ಮುಂದಿನ ವರ್ಷ ನಾನು ಬದುಕಿರುತ್ತೇನೋ ಇಲ್ಲವೋ ಗೊತ್ತಿಲ್ಲ. ನಾನು ಈ ತಪ್ಪಿದ ಉಪವಾಸಗಳನ್ನು ಮತ್ತೆ ಅನುಷ್ಠಿಸಲು ಸಾಧ್ಯವಾಗುತ್ತದೆಯೋ ಇಲ್ಲವೊ ನನಗೆ ತಿಳಿದಿಲ್ಲ. ಹೀಗೆ ಅವನು ಅಲ್ಲಾಹನಲ್ಲಿ ಸಹಾಯಕ್ಕಾಗಿ ಪ್ರಾರ್ಥಿಸಿದರೆ, ಅಂತಹ ಮನಸ್ಸಿಗೆ ಅಲ್ಲಾಹನು ಶಕ್ತಿಯನ್ನು ನೀಡುತ್ತಾನೆ.

ಅಲ್ಲಾಹನು ಇಚ್ಛಿಸಿದ್ದರೆ, ಅವನು ಇತರ ಉಮ್ಮತ್‌ಗಳಂತೆ ಈ ಉಮ್ಮತ್ತಿನಲ್ಲಿ ಯಾವ ಮಾನದಂಡಗಳನ್ನು ಇರಿಸುತ್ತಿರಲಿಲ್ಲ, ಆದರೆ ಅವನು ಮಾನದಂಡಗಳನ್ನು ಒಳ್ಳೆಯದಕ್ಕಾಗಿ ಇರಿಸಿದ್ದಾನೆ, ನನ್ನ ದೃಷ್ಟಿಯಲ್ಲಿ ಓರ್ವ ಮನುಷ್ಯ ನೈಜ್ಯವಾಗಿ ಹಾಗೂ ಸಂಪೂರ್ಣ ವಿಧೇಯನಾಗಿ ಅಲ್ಲಾಹನ ಆಸ್ತಾನದಲ್ಲಿ ಈ ಪವಿತ್ರ ಮಾಸಲದಲ್ಲಿ ನೀನು ನನಗೆ ವಂಚಿತನಾಗಿಸಬೇಡ ಎಂದು ಕೇಳಿಕೊಂಡರೆ ಅಲ್ಲಾಹನು ಅವನನ್ನು ವಂಚಿತನಾಗಿಸುವುದಿಲ್ಲ, ಇಂತಹ ಪರಿಸ್ಥಿತಿಯಲ್ಲಿ ಮನುಷ್ಯನು ರಮಝಾನ್ ಮಾಸದಲ್ಲಿ ರೋಗ್ರಗ್ರಸ್ತನಾದರೆ ಅವನ ಆ ರೋಗವು ಅವನಿಗಾಗಿ (ರಹ್ಮತ್) ಅನುಗ್ರಹವಾಗಿರುವುದು. ಏಕೆಂದರೆ ಪ್ರತಿಯೊಂದು ಕಾರ್ಯವು ನಿಯತ್ತಿನಲ್ಲಿ ಅವಲಂಬಿತವಾಗಿದೆ. ಆದ್ದರಿಂದ ಮೂಮಿನ್ ತನ್ನ ಅಸ್ತಿತ್ವದಿಂದ ತನ್ನನ್ನು ಅಲ್ಲಾಹನ ಮಾರ್ಗದಲ್ಲಿ ಧೈರ್ಯಶಾಲಿ ಎಂದು ಸಾಬಿತುಗೊಳಿಸಬೇಕು. ಯಾವ ವ್ಯಕ್ತಿಯು ಉಪವಾಸದಿಂದ ವಂಚಿತನಾಗಿರುತ್ತಾನೊ, ಆದರೆ ಅವನ ಮನಸ್ಸಿನಲ್ಲಿ ಆತನು ಆರೋಗ್ಯವಂತನಾಗಿರುತ್ತಿದರೆ ಅವನು ಸಹ ಉಪವಾಸಗಳನ್ನು ಅನುಷ್ಠಿಸುತ್ತಿದ್ದನು ಎಂಬ ನಿಯ್ಯತ್ ಹಾಗೂ ನೋವು ಇದ್ದರೆ ದೇವದೂತರು ಅವನಿಗಾಗಿ ಉಪವಾಸ ಮಾಡುತ್ತಾರೆ. ಅದಕ್ಕೆ ಶರತ್ತು ಏನೆಂದರೆ ಆತನು ನೆಪ ಮಾಡುವವನಾಗಬಾರದು ಹೀಗಿದ್ದಲ್ಲಿ ಸರ್ವಶಕ್ತನಾದ ಅಲ್ಲಾಹನು ಅವನಿಗೆ ಪ್ರತಿಫಲದಿಂದ ವಂಚಿತನಾಗಿರಿಸುವುದಿಲ್ಲ.

**(ಮಲ್‌ಫೂಝಾತ್, ಸಂಪುಟ–3, ಪುಟ–426, ಪ್ರಕಟಿತ 2018 ಖಾದಿಯನ್)**

**ದೌರ್ಜನ್ಯಕ್ಕೆ ಒಳಗಾದರೂ ಧರ್ಮ ಪ್ರಚಾರಕ್ಕೆ ಸಂಪೂರ್ಣ ತಡೆ ಒಡ್ಡುವವರೆಗೆ ಸತ್ಯ ವಿಶ್ವಾಸಿಗಳು ತಮ್ಮ ಸ್ವದೇಶಗಳನ್ನು ತೊರೆಯದೆ ತಮ್ಮ ಧರ್ಮ ಪ್ರಚಾರದ ಕಾರ್ಯಗಳನ್ನು ಮುಂದುವರೆಸಿಕೊಂಡು ಹೋಗಬೇಕಾಗಿದೆ.**

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಸೂರಃ ಅನ್ನಹ್ಲ್ ವಚನ 42 **ವಲ್ಲಝೀನ ಹಾಜರು ಫಿಲ್ಲಾಹಿ ಮಿನ್ ಬಅ್‌ದಿ ಮಾ ಝುಲಿಮು ಲನುಬವ್ವಿಅನ್ನಹುಮ್ ಫಿದ್ದುನಿಯಾ ಹಸನತನ್** ರ ವ್ಯಾಖ್ಯಾನ ಮಡುತ್ತಾ ಹೇಳುತ್ತಾರೆ. ಫಿಲ್ಲಾಹಿ ಎಂಬ ಪದವು ಹಲವು ಅರ್ಥಗಳನ್ನು ಒಳಗೊಂಡಿದೆ.

**ಫಿಲ್ಲಾಹಿ** ಇದರ ಅರ್ಥವು ಅನೇಕ ರೀತಿಯಲ್ಲಾಗುತ್ತದೆ.

(1) ಫೀ "ಲಾಮ್" ಅರ್ಥದಲ್ಲಾದರೆ ಅಲ್ಲಾಹನಿಗೋಸ್ಕರ ಸ್ವದೇಶವನ್ನು ತೊರೆದಂತೆ. ಅದರ

*(ಪುಟ ಸಂಖ್ಯೆ–09 ರಲ್ಲಿ ಮುಂದುವರಿಸಲಾಗಿದೆ)*

لَا اِلٰہَ اِلَّا اللّٰہُ مُحَمَّدٌ رَّسُوْلُ اللّٰہِ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِی الْعَالَمِ ✿ شَرَّ السُّمُوْمِ عَدَاوَۃُ الصُّلَحَاءِ

## ಅನ್ಯ ಧರ್ಮಿಯರು ಇಸ್ಲಾಮ್ ಧರ್ಮದ ವಿರೋಧವಾಗಿ ವರ್ತಿಸಲು ಹಾಗೂ ಆರೋಪಿಸಲು ಮಸೀಹ್ ಮೌಊದ್(ಅ) ರವರೇ ಕಾರಣ ಎಂದು ಸಾಬೀತುಪಡಿಸಿದರೆ ಅವರಿಗೆ ಒಂದು ಸಾವಿರ ರೂಪಾಯಿಗಳ ಬಾರೀ ಬಹುಮಾನ

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಈ ವೈಭವಯುತ ಬಹುಮಾನದ ಪಂಥಾಹ್ವಾನ ನಾವು ಅವರ ಗ್ರಂಥ **"ಅಲ್‌ಬಲಾಗ್"** ರೂಹಾನಿ ಖಝಾಯಿನ್ ಸಂಪುಟ 13 ರಿಂದ ಪ್ರಸ್ತುತಪಡಿಸುತ್ತಿದ್ದೇವೆ. ಹಿಂದಿನ ಸಂಚಿಕೆಯಲ್ಲಿ ನಾವು ಪ್ರಸ್ತಾಪಿಸಿದ್ದೆವು. ಓರ್ವ ಸ್ಥಳೀಯ ಪಾದರಿ ಅಹ್ಮದ್ ಶಾಹ್ ಅತ್ಯಂತ ಅಪಮಾನಕರವಾದ ಗ್ರಂಥ "ಉಮ್ಮಹಾತುಲ್ ಮೂಮಿನೀನ್" ವಿಷಯದಲ್ಲಿ ಅಂಜುಮನ್ ಹಿಯಾಯತೆ ಇಸ್ಲಾಂ ಲಾಹೋರ್ ಸರಕಾರಕ್ಕೆ ಕೇವಲ ದೂರು ಸಲ್ಲಿಸುವಷ್ಟೇ ಸೀಮಿತಗೊಂಡಿತ್ತು. ಅದರ ಉತ್ತರವನ್ನು ಬರೆಯಲು ಇಚ್ಛಿಸಲಿಲ್ಲ. ಅಗತ್ಯ ಎಂದು ಎಣಿಸಲಿಲ್ಲ. ಆಗ ನಾವು ಹಿಂದಿನ ಸಂಚಿಕೆಯಲ್ಲಿ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ನಿಲುವು ಮತ್ತು ಅಂಜುಮನ್ ಹಿಮಾಯತ್ ಇಸ್ಲಾಂ ಅವರ ನಡುವಿನ ಸ್ಥಿತಿಗತಿ ಸ್ವಲ್ಪಮಟ್ಟಿಗೆ ವಿವರಿಸಿದೆವು. ಈ ಸಂಚಿಕೆಯಲ್ಲಿ ನಾವು ಸಯ್ಯದ್‌ನಾ ಹಜ್‌ರತ್ ಮಸೀಹ್ ಮೌಊದ್(ಅ) ರವರ ಬಹುಮಾನದ ಪಂಥಾಹ್ವಾನ ಪ್ರಸ್ತುತಪಡಿಸಿದೆವು. ಅಂಜುಮನಿನ ಸಹವರ್ತಿಗಳು ಹುಝೂರ್(ಅ) ರವರ ಮೇಲೆ ಆರೋಪ ಹೊರಿಸಿದ್ದೇನೆಂದರೆ, ಇಸ್ಲಾಮ್ ಧರ್ಮದ ಮೇಲೆ ಇತರರು ಆರೋಪ ಮಾಡಲು ಕಾರಣ ಸ್ವಯಂ ಹಝ್ರತ್ ಮಸೀಹ್ ಮೌಉದ್ ಅವರೇ ಆಗಿದ್ದಾರೆ. ಅವರು ತನ್ನ ಗ್ರಂಥದಲ್ಲೂ ಅನ್ಯ ಸಮುದಾಯಗಳ ಕುರಿತು ಕಠಿಣ ಶಬ್ಧಗಳ ಪ್ರಯೋಗ ಮಾಡದಿರುತ್ತಿದ್ದರೆ ಅವರು ಸಹ ಕಠಿಣ ಭಾಷೆ ಬಳಸುತ್ತಿರಲಿಲ್ಲ. ಅವರುಗಳಿಗೆ ಆಥಮ ಮತ್ತು ಲೇಖರಾಮನ ಕುರಿತಾದ ಭವಿಷ್ಯವಾಣಿಗಳ ಬಗ್ಗೆಯೂ ಆಕ್ಷೇಪವಿತ್ತು. ಅದರಿಂದಾಗಿ ಗೊಂದಲ ಏರ್ಪಟ್ಟಿತ್ತು. ಈ ಪ್ರಯುಕ್ತ ಪೈಸಾ ಪತ್ರಿಕೆಯ ಸಂಪಾದಕರ ಹಾಗೂ ಅಬ್‌ಝುರ್ವರ್ ಅವರ ಆರೋಪಗಳನ್ನು ಉಲ್ಲೇಖಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ.

"ಪೈಸಾ ವಾರ್ತಾ ಪತ್ರಿಕೆಯ ಸಂಪಾದಕರು ಮತ್ತು ಅಬ್‌ಝುರ್‌ವರ್ ತಮ್ಮ ಪತ್ರಿಕೆಗಳಲ್ಲಿ ನನ್ನ ಮೇಲೆ ಆರೋಪ ಹೊರಿಸಿದ್ದಾರೆ. ಹಿಂದೂಗಳ ಮತ್ತು ಮುಸ್ಲಿಮರ ನಡುವೆ ದಂಗೆ ಗೊಂದಲಗಳಿಗೆ ನಾನೇ ಕಾರಣನಾಗಿದ್ದೇನೆ ಎಂದು. ನಾನು ಲೇಖರಾಮನ ಸಾವಿನ ಬಗ್ಗೆ ಭವಿಷ್ಯವಾಣಿ ಮಾಡಿದ್ದೆ. ಅವನ ಸಾವಿನ ನಂತರ ಹಿಂದೂಗಳಲ್ಲಿ ರೋಷ ಉಂಟಾಯಿತು ಮತ್ತು ಸಂಶಯಗಳು ಹುಟ್ಟಿಕೊಂಡವು. (ಅಲ್ ಬಲಾಗ್, ಫರ್ಯಾದೆ ದರ್ದ್, ರೂಹಾನಿ ಖಝಾಈನ್, ಸಂಪುಟ–13, ಪುಟ–406 ಅಡಿಟಿಪ್ಪಣಿ)

### ಉತ್ತರ ನೀಡುವ ಸಂದರ್ಭಗಳಲ್ಲಿ ನಾವು ಯಾವಾಗಲು ಮೃದು ಮತ್ತು ಸಭ್ಯ ಭಾಷೆಯನ್ನು ಬಳಸಿದೆವು.

ಪೈಸಾ ವಾರ್ತಾಪತ್ರಿಕೆಯ ಸಂಪಾದಕರ ಮತ್ತು ಆಬ್‌ಝುರ್‌ವರ್ ಅವರ ಆರೋಪಗಳ ಉತ್ತರ ಮತ್ತು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ವೈಭವಯುತ ಬಹುಮಾನದ ಪಂಥಾಹ್ವಾನಗಳ ಕುರಿತು ನಾವು ಅವರ ಪದಗಳನ್ನೇ ಪ್ರಸ್ತುತಪಡಿಸುತ್ತಿದ್ದೇವೆ.

ಅವರು ಹೇಳುತ್ತಾರೆ. ಹೌದು. ಅಲ್ಲಾಹನು ನಮ್ಮ ಮೇಲೆ ಕಡ್ಡಾಯಗೊಳಿದ್ದಾನೆ. ಸುಳ್ಳು ಆರೋಪಗಳನ್ನು ಜಾಣ್ಮೆಯಿಂದ ಮತ್ತು ಉತ್ತಮ ರೀತಿಯಲ್ಲಿ ರದ್ದುಗೊಳಿಸಬೇಕು. ಅಲ್ಲಾಹನು ಬಲ್ಲವನಾಗಿದ್ದಾನೆ. ಉತ್ತರ ನೀಡುವಾಗ ನಾವು ಎಂದೂ ಮೃದು ಭಾಷೆ ಮತ್ತು ಸಭ್ಯತೆಯನ್ನು ಕೈಬಿಡಲಿಲ್ಲ. ಯಾವಾಗಲೂ ಮೃದು ಮತ್ತು ಸಭ್ಯ ಪದಗಳನ್ನೇ ಬಳಸಿರುತ್ತೇವೆ. ಕೇವಲ ಕೆಲ ಸಂದರ್ಭಗಳಲ್ಲಿ ವಿರೋಧಗಳು ಅತ್ಯಂತ ಕಠಿಣ ಮತ್ತು ಕಿಡಿಗೇಡಿ ಬರಹಗಳನ್ನು ಬರೆದಾಗ ಅವರು ಎಚ್ಚೆತ್ತು ತಮ್ಮ ಪೈಶಾಚಿಕ ವರ್ತನೆ ಕೈಬಿಡಬೇಕು ಎಂಬ ಉದ್ದೇಶದಿಂದ ಸ್ವಲ್ಪ ಮಟ್ಟಿಗೆ ಪರಿಸ್ಥಿತಿಗೆ ಅನುಗುಣವಾಗಿ ಕಠಿಣತೆ ಬಳಸಿದ್ದೇನೆ. ಇದು ಯಾವುದೇ ರೀತಿಯಲ್ಲಿ ನನ್ನ ಆತ್ಮಸಂಬಂಧಿ ಭಾಷೆ ಅಲ್ಲ, ಬದಲು ಕೇವಲ **"ಉದ್‌ಉ ಇಲಾ ಸಬೀಲಿ ರಬ್ಬಿಕ ಬಿಲ್ ಹಿಕ್ಮತಿ ವಲ್ ಮೌಈಝತಿಲ್ ಹಸನತಿ ವಜಾದಿಲ್‌ಹುಮ್ ಬಿಲ್ಲತಿ ಹಿಯ ಅಹ್ಸನು"** ವಚನದಂತೆ ಜಾಣ್ಮೆಭರಿತ ಕರ್ಮವಾಗಿದೆ. ವಿರೋಧಿಗಳು ತಮ್ಮ ಎಲ್ಲೆಗಳನ್ನು ಮೀರಿ ಮಾತನಾಡಿದಾಗ, ಅವರು ನಮ್ಮ ಸರದಾರರು, ನೇತಾರರು ಸೃಷ್ಟಿಗೆ ಕಾರಣಕರ್ತರಾದ ಪ್ರವಾದಿ(ಸ) ಅವರ ಬಗ್ಗೆ ಅಂತಹ ಕೀಳುಮಟ್ಟದ ಮತ್ತು ದುಷ್ಟ ಪದಗಳನ್ನು ಬಳಸಿದಾಗ ಮಾತ್ರ. ಅದರಿಂದ ಸಮಾಜದಲ್ಲಿ ಅಶಾಂತಿ ಉಂಟಾಗುವ ಸಂಭವವಿದ್ದಾಗ ಜಾಣ್ಮೆಯಿಂದ ಈ ಕ್ರಮ ಕೈಗೊಂಡಿದ್ದೇನೆ. ಅವರ ಅಪವಿತ್ರ ತೀಕ್ಷ್ಣ ಆಕ್ರಮಣ ಪ್ರತಿಯಾಗಿ ಈ ಹಾದಿ ತುಳಿದಿರುತ್ತೇನೆ. ಅದೇ ಜಾಗದಲ್ಲಿ ಉಪದೇಶವು ಹೇಳಿರುತ್ತೇನೆ. ತಮ್ಮ ಸರಕಾರದ ಆದೇಶಗಳನ್ನು ಪಾಲಿಸಿರಿ ಮತ್ತು ಅನುಸರಿಸಿರಿ, ಪಾಶವಿಕ ನೀತಿಯನ್ನು ಕೈಬಿಡಿರಿ. ಹಾಗೆ ಅದೊಂದು ಜಾಣ್ಮೆಯ ನುಡಿಯಾಗಿತ್ತು. ಸಾರ್ವಜನಿಕ ಗೊಂದಲವನ್ನು ದಮನಿಸಲು ಕೆಲವೊಮ್ಮೆ ಸಂದರ್ಭೋಚಿತವಾಗಿ ಆ ರೀತಿ ವರ್ತಿಸಬೇಕಾಯಿತು. ಅದರಿಂದ ಇಸ್ಲಾಮ್ ಧರ್ಮದ ಪ್ರಜೆ ಉತ್ತೇಜನಗೊಂಡು ಪಾಶವಿಕ ಹಾದಿ ತುಳಿಯಬಾರದು ಎಂಬ ಉದ್ದೇಶವಾಗಿತ್ತು. ಅದು ಒಬ್ಬ ಮಧ್ಯವ್ಯಸನಿಗೆ ಔಷಧಿ ಕುಡಿಸುವ ರೀತಿಯಾಗಿದೆ. ಅದು ಮಧ್ಯಪಾನ ಬಿಡಿಸುವ ಒಂದು ವಿಧಾನವಾಗಿದೆ. ಅದರ ಹೊರತು ನಮ್ಮ ಮೇಲೆ ನಾವೆ ಕಠಿಣ ಭಾಷೆ ಪ್ರಯೋಗದ ಬುನಾದಿಯಾಗಿದ್ದೇವೆ ಎಂಬುದು ನಮ್ಮ ಮೇಲೆ ಎಸಗುವ ಘೋರ ದೌರ್ಜನ್ಯವಾಗಿದೆ. ಅದಕ್ಕೆ ನಾವು **"ಲಾನತುಲ್ಲಾಹಿ ಅಲಲ್–ಕಾಝಿಬೀನ್"** ಅಲ್ಲದೇ ಏನು ಉತ್ತರ ಕೊಡಬೇಕು.

### ಬರಾಹೀನೆ ಅಹ್ಮದಿಯಾ ಕ್ರೈಸ್ತರ ಮತ್ತು ಆರ್ಯರ ಉತ್ತರವಾಗಿ ಬರೆಯಲಾಗಿತ್ತು. ಅವರು ನಮ್ಮ ನಬಿ(ಸ) ರವರ ಪೈಕಿ ಅಪಮಾನ ಹಾಗೂ ಬೈಗಳಗಳು ಮಿತಿಮೀರಿದ್ದರು ಸಹ ಆ ಗ್ರಂಥದಲ್ಲಿ ಅತ್ಯಂತ ಮೃದುವಾದ ಮತ್ತು ಸಭ್ಯತೆಯನ್ನು ಪ್ರದರ್ಶಿಸಲಾಗಿತ್ತು.

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಈ ಬಗ್ಗೆ ಯಾರು ನ್ಯಾಯಯುತವಾಗಿ ತಮ್ಮ ಅಬಿಮತ ವ್ಯಕ್ತಪಡಿಸ ಬಯಸುತ್ತಾರೆ. ಅವರು ತಿಳಿಯಲು ಏನು ಕಷ್ಟವಾಗದು. ಲೋಕದಲ್ಲಿ ಪ್ರಕಟವಾದ ನಮ್ಮ ಪ್ರಥಮ ಗ್ರಂಥ "ಬರಾಹೀನೆ ಅಹ್ಮದಿಯಾ ಆಗಿದೆ. ಅದಕ್ಕಿಂತ ಮೊದಲು ಪಾದರಿ ಇಮಾಮುದ್ದೀನ್ ಅವರ ಅಪವಿತ್ರ ಗ್ರಂಥಗಳು ಮತ್ತು ಇಂದ್ರಮನ್ ಮುರಾದಾಬಾದಿ ಅವರ ಅತ್ಯಂತ ಕಠಿಣ ಹಾಗೂ ಅಶ್ಲೀಲತೆಯಿಂದ ಕೂಡಿದ ಬರಹಗಳು ಹಾಗೂ ದಯಾನಂದ ಅವರ "ಸತ್ಯ ಪ್ರಕಾಶ" ಗ್ರಂಥ ಅಪಶಬ್ಧ ಮತ್ತು ಅಶ್ಲೀಲ ಹಾಗೂ ಅವಹೇಳನದಿಂದ ತುಂಬಿ ಹೋಗಿತ್ತು. ದೇಶದಲ್ಲಿ ಪ್ರಕಟಗೊಂಡಿದ್ದವು. ಅದರಿಂದ ಈ ದೇಶದ ಮುಸಲ್ಮಾನರು ಎಷ್ಟೊಂದು ಆವೇಶಗೊಂಡಿದ್ದರೆಂದರೆ, ಬೆಂಕಿಯಲ್ಲಿ ಹೂತಿಟ್ಟ ಕಬ್ಬಿಣ ಬೆಂಕಿಯ ಕೆಂಡದ ರೀತಿಯಾಗಿತ್ತು. ಆದರೆ ನಾವು ಬರಾಹೀನ್ ಅಹ್ಮದಿಯಾದಿಂದ ತರ್ಕದ ಒಂದು ಹಿತವಾದ ಮಾದರಿಯಿಂದ ಅವರ ಆಕ್ರೋಶವನ್ನು ತಲ್ಲಣಗೊಳಿಸಿದ್ದೆವು ಮತ್ತು ಅವರ ಭಾವನೆಗಳನ್ನು ಬೇರೆಡೆ ತಿರುಗಿಸಿದೆವು. ಒಬ್ಬ ವೈದ್ಯನು ಗುಪ್ತಾಂಗಗಳಿಂದ ಅವನ ದೃಷ್ಟಿ ಬೇರೆಡೆ ತಿರುಗಿಸಿದಂತೆ. ಅಂದ ಹಾಗೆ ಬರಾಹೀನೆ ಅಹ್ಮದಿಯಾ ಕ್ರೈಸ್ತ ಮತ್ತು ಆರ್ಯರ ಉತ್ತರವಾಗಿ ಬರೆಯಲಾಗಿತ್ತು. ನಮ್ಮ ನಬಿ(ಸ) ರವರ ಕುರಿತು ಅವರ ಅವಹೇಳನ ಮತ್ತು ಬಯ್ಗುಳಗಳು ಮಿತಿ ಮೀರಿಸಿದ್ದವು. ಆಗಲೂ ಸಹ ಆ ಗ್ರಂಥದಲ್ಲೇ ಅತ್ಯಂತ ಮೃದು ಹಾಗೂ ಸಭ್ಯ ಭಾಷೆಯನ್ನು ಬಳಸಲಾಗಿದೆ. ಸಂದರ್ಭಕ್ಕೆ ಅನುರೂಪವಾಗಿ ಅವರ ಆಕ್ರಮಣಗಳಿಗೆ ತಕ್ಕುದಾದ ಭಾಷೆ ಉಪಯೊಗಿಸಿದ ಹೊರತುಪಡಿಸಿ ಅದು ಪ್ರತಿಯೊಬ್ಬ ಎದುರಾಳಿಗಳಿಗೆ ತರ್ಕಕ್ಕೆ ಸರಿಯಾಗಿ ಬಳಸುವುದು ಅನಿವಾರ್ಯವಾಗುತ್ತದೆ. ಅದನ್ನು ಹೊರತುಪಡಿಸಿದರೆ ಯಾವ ಕಠಿಣ ಪದವು ಆ ಗ್ರಂಥದಲ್ಲಿಲ್ಲ. ಒಂದು ವೇಳೆ ಇದ್ದರೂ, ಯಾವನೇ ನ್ಯಾಯುವಂತನೂ ಅವನು ಇಮಾಮುದ್ದೀನ್ ಮತ್ತು ಇಂದ್ರಮನ್ ಹಾಗೂ ರನ್ಹಯ್ಯಲಾಲ್‌ರವ ಗ್ರಂಥಗಳು ಹಾಗೂ ದಯಾನಂದ ಅವರ ಸತ್ಯಪ್ರಕಾಶ ಸಹ ಓದಿದವರಾಗಿದ್ದಾರೆ. ಅವರಿಗೆ ನಮ್ಮ ಮೇಲೆ ಕಿಂಚಿತ್ತೂ ಸಹ ಆರೋಪ ಹೊರಿಸಲು ಸಾಧ್ಯವಾಗುತ್ತಿರಲಿಲ್ಲ. ಏಕೆಂದರೆ ನಾವು ಸಂದರ್ಭಸಹಿತ ಕೆಳಮಟ್ಟಕ್ಕೆ ಕಠಿಣತೆ ಬಳಸಿದ್ದೇವೆ. ಅವರ ಗ್ರಂಥದ ಅಶ್ಲೀಲತೆ ಮತ್ತು ಅವಹೇಳನದಿಂದ ಕೂಡಿದ ಗ್ರಂಥಗಳಿಗೆ ಹೋಲಿಸಿದರೆ ಸಾಸಿವೆಗೆ ಹೋಲಿಸಿದಂತಾಗುವುದು. ನಾವು ಏನೆಲ್ಲ ರಕ್ಷಣಾದೃಷ್ಟಿಯಿಂದ ಒಂದಿಷ್ಟು ಬರೆದಿದ್ದೇವೆ. ವಾಸ್ತವದಲ್ಲಿ ಅದು ವ್ಯಕ್ತಿಗಳ ದೋಷವಾಗಿತ್ತು. ಅವರು ತಮ್ಮ ಬರಹದಲ್ಲಿ ಅತ್ಯಂತ ಕಠಿಣತೆ ಬಳಸಿ ನಮ್ಮನ್ನು ಉತ್ತೇಜಿತಗೊಳಿಸಿದ್ದರು. ಉದಾಹರಣೆಗೆ ಒಬ್ಬನು ತುಂಟತನದಿಂದ ಮತ್ತೊಬ್ಬನಿಗೆ ನಿನ್ನ ತಂದೆ ಕೆಟ್ಟ ನಾಲಾಯಕ್ಕಾಗಿದ್ದ ಎಂದರೆ ಅವನು ಅದರ ಉತ್ತರವಾಗಿ ಅಲ್ಲ ನಿನ್ನ ತಂದೆಯೇ ಹಾಗಾಗಿದ್ದನು ಎಂದಂತೆ ಆಗ ಇಂತಹ ಪರಿಸ್ಥಿತಿಯಲ್ಲಿ ಎರಡನೆಯವನ ಮಾತು

*(ಪುಟ 09 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

"ನೆನಪಿಡಿ, ನನ್ನ ಸರಪಳಿಯು ಕೇವಲ ಅಂಗಡಿಯಾಗಿದ್ದರೆ, ಅದರ ಹೆಸರು ಅಳಿಸಿಹೋಗುತ್ತದೆ, ಆದರೆ ಅದು ಸರ್ವಶಕ್ತ ಅಲ್ಲಾಹನಿಂದಾಗಿದೆ ಮತ್ತು ಖಂಡಿತವಾಗಿಯೂ ಅವನಿಂದ ಬಂದಿದ್ದರೆ, ಇಡೀ ಜಗತ್ತು ಅದನ್ನು ವಿರೋಧಿಸಿದರೂ, ಅದು ಬೆಳೆಯುತ್ತದೆ, ಹರಡುತ್ತದೆ ಮತ್ತು ದೇವದೂತರು ಅದನ್ನು ರಕ್ಷಿಸುತ್ತಾರೆ. ಯಾರೂ ನನ್ನೊಂದಿಗೆ ಇಲ್ಲದಿದ್ದರೂ ಮತ್ತು ಯಾರೂ ನನಗೆ ಸಹಾಯ ಮಾಡದಿದ್ದರೂ, ಈ ಪ್ರಕ್ರಿಯೆಯು ಯಶಸ್ವಿಯಾಗುತ್ತದೆ ಎಂದು ನಾನು ಇನ್ನೂ ನಂಬುತ್ತೇನೆ "(ಹಝ್ರತ್ ಮಸೀಹ್ ಮೌಊದ್(ಅ))

**ಸರ್ವಶಕ್ತನಾದ ಅಲ್ಲಾಹನಿಂದ ಸಹಾಯವು ಬಂದಾಗ, ಅದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ**

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಅನುಗ್ರಹದಾಯಕ ಜೀವನಚರಿತ್ರೆಯಿಂದ ಹಝ್ರತ್ ಮುಸ್ಲಿಹ್ ಮೌಊದ್(ರ)ರವರು ವಿವರಿಸಿರುವ ಕೆಲವು ವಿಶ್ವಾಸವರ್ಧಕ ಘಟನೆಗಳು**

**ಈ ಘಟನೆಗಳು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಬಗ್ಗೆ ಸತ್ಯವನ್ನು ಹೇಳುತ್ತವೆ, ಅವು ನಮ್ಮ ಸುಧಾರಣೆ ಮತ್ತು ನಮ್ಮ ನಂಬಿಕೆಯನ್ನು ಬಲಪಡಿಸುವ ಕಡೆಗೆ ನಮ್ಮ ಗಮನವನ್ನು ಸೆಳೆಯುತ್ತವೆ. ನಾವು ನಮ್ಮ ಸುಧಾರಣೆಯ ಕಡೆಗೆ ಗಮನ ಕೊಡದಿದ್ದರೆ ಅವರ ಮಾತು ಕೇಳುವುದರಲ್ಲಿ ಅರ್ಥವಿಲ**

**ಮುಮಿನ್‌ಗಳು ಸಹ ಪೀಡಿತರಾಗುತ್ತಾರೆ, ಆದ್ದರಿಂದ ನೀವು ತಾಳ್ಮೆ ವಹಿಸಿ ದುಆ ಮಾಡಿದರೆ ಸರ್ವಶಕ್ತನಾದ ಅಲ್ಲಾಹನು ಈ ಸಂಕಟಗಳನ್ನು ನಿವಾರಿಸುತ್ತಾನೆ.**

**ಕುರ್ದಿಳ್ ಭಾಳೆಯಲ್ಲಿ ಮೊದಲ ಅಹ್ಮದೀಯ ವೆಬ್‌ಸೈಟ್‌ನ ಪ್ರಾರಂಭದ ಪ್ರಕಟಣೆ**

**ಸರ್ವಶಕ್ತನಾದ ಅಲ್ಲಾಹನು ಜಗತ್ತನ್ನು ವಿನಾಶದಿಂದ ರಕ್ಷಿಸಲಿ ಮತ್ತು ಮನುಳ್ಯರಿಗೆ ಬುದ್ಧಿವಂತಿಕೆಯನ್ನು ನೀಡಲಿ ಮತ್ತು ಅವರ ಸೃಷ್ಟಿಕರ್ತನನ್ನು ಗುರುತಿಸಲಿ.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **25-03-2022** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

إِيَّاكَ نَعْبُدُ وَإِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಎರಡು ದಿನಗಳ ಹಿಂದೆ ಮಾರ್ಚ್ ದಿನಾಂಕ 23 ಆಗಿತ್ತು. ಆ ದಿನವನ್ನು ನಮ್ಮ ಜಮಾಅತ್‌ನಲ್ಲಿ ಯೌಮೇ ಮಸೀಹ್ ಮೌಊದ್ ಎಂದು ಆಚರಿಸಲಾಗುತ್ತದೆ. ಆ ದಿನಾಂಕದಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪ್ರಥಮ ಬೈಅತ್ ಪಡೆದುಕೊಂಡಿದ್ದರು. ಆ ದಿನಾಂಕದಂದು ಅಲ್ಲಾಹನ ಅನುಗ್ರಹದಿಂದ ಜಮಾಅತಿನಲ್ಲಿ ಜಲ್ಸಗಳನ್ನು ಜರಗಿಸಲಾಗುತ್ತದೆ. ಆ ಜಲ್ಸಗಳಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಾದಗಳ ಬಗ್ಗೆ, ಅವರ ಆಗಮನದ ಆವಶ್ಯಕತೆಗಳ ಬಗ್ಗೆ, ಅವರ ಕುರಿತು ನುಡಿಯಲಾದ ಭವಿಷ್ಯವಾಣಿಗಳ ಬಗ್ಗೆ, ಅವರ ಜೀವಿತದ ವಿವಿಧ ಮಗ್ಗಲುಗಳ ಬಗ್ಗೆ ವಿವರಿಸಲಾಗುತ್ತದೆ. ಕಾಲಘಟ್ಟದ ಆವಶ್ಯಕತೆ ಪ್ರಕಾರ ತನ್ನ ಆಗಮನದ ಪ್ರಾಮುಖ್ಯತೆ ಬಗ್ಗೆ ವಿವರಿಸುತ್ತಾ ಒಂದು ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ: ಈ ಕಾಲಘಟ್ಟದಲ್ಲಿ ಅಲ್ಲಾಹನು ಬಹಳ ಅನುಗ್ರಹಿಸಿರುವನು. ಅಲ್ಲಾಹನು ತನ್ನ ಧರ್ಮವಾದ ಇಸ್ಲಾಮ್ ಧರ್ಮಕ್ಕೆ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಸಹಾಯಕವಾಗಿ ಅಭಿಮಾನ ಪ್ರಕಟಿಸಲು ನಿಮ್ಮ ಮುಂದೆ ಮಾತನಾಡುತ್ತಿರುವ ಈ ಒಬ್ಬ ವ್ಯಕ್ತಿಯನ್ನು ಇಸ್ಲಾಮಿನ ಪ್ರಕಾಶದ ಕಡೆಗೆ ಜನರನ್ನು ಆಮಂತ್ರಿಸಲಿಕ್ಕಾಗಿ ಕಳುಹಿಸಿರುವನು. ಈ ಕಾಲಘಟ್ಟದಲ್ಲಿ ಇಂತಹ ಗಲಭೆ ಮತ್ತು ಪಿತೂರಿಗಳು ಇಲ್ಲದಿರುತ್ತಿದ್ದರೆ, ಧರ್ಮವನ್ನು ಮುಳುಗಿಸಲಿಕ್ಕಾಗಿ ಈ ವಿಧದ ಪ್ರಯತ್ನಗಳು ನಡೆದಿಲ್ಲದಿದ್ದರೆ ಇದರ ಆವಶ್ಯಕತೆ ಇರಲಿಲ್ಲ. ಯಾರನ್ನೂ ಕಳುಹಿಸಬೇಕಾದ ಯಾವುದೇ ಆವಶ್ಯಕತೆ ಇರಲಿಲ್ಲ. ಆದರೆ ನೀವು ನೋಡುತ್ತಿರುವಿರಿ, ಎಲ್ಲ ದಿಕ್ಕುಗಳಿಂದಲೂ ಎಡ ಬಲಗಳಿಂದಲೂ ಇಸ್ಲಾಮನ್ನು ನಾಶಮಾಡುವ ಯೋಚನೆಯಲ್ಲಿ ಎಲ್ಲ ಕೋಮುಗಳು ನಿರತವಾಗಿವೆ.

ಹಝ್ರತ್ ಮಸೀಹ್ ಮೌಊದ್(ಅ) ವಾದಿಸಿದ ಕಾಲದಲ್ಲಿ ಇದೇ ಪ್ರಯತ್ನ ನಡೆಯುತ್ತಿತ್ತು. ಈಗಲೂ ಇದೇ ಸ್ಥಿತಿಯಾಗಿದೆ. ಆದರೆ ಮುಸ್ಲಿಮರೆಂದು ಕರೆಯಲ್ಪಡುವ ಅನೇಕರಿಗೆ ಇದು ಮನವರಿಕೆಯಾಗುತ್ತಿಲ್ಲ. ಹೇಗಿದ್ದರೂ ಅವರು ಹೇಳುತ್ತಾರೆ:

ಬರಾಹೀನೆ ಅಹ್ಮದಿಯದಲ್ಲೂ ನಾನು ಹೇಳಿದಂತೆ ಇಸ್ಲಾಮಿನ ವಿರುದ್ಧ 6 ಕೋಟಿ ಪುಸ್ತಕಗಳನ್ನು ಬರೆದು ಪ್ರಕಟಿಸಲಾಗಿವೆ. ವಿಸ್ಮಯಕರವಾದ ಸಂಗತಿಯೇನೆಂದರೆ, ಭಾರತದಲ್ಲಿ ಮುಸ್ಲಿಮರ ಜನಸಂಖ್ಯೆ 6 ಕೋಟಿಯಾಗಿದೆ. ಇಸ್ಲಾಮಿನ ವಿರುದ್ಧ ಇರುವ ಪುಸ್ತಕಗಳ ಸಂಖ್ಯೆಯೂ ಅಷ್ಟೇ ಇವೆ. (ಇದು ಹಝ್ರತ್ ಮಸೀಹ್ ಮೌಊದ್(ಅ)ರ ಕಾಲದ ಸಂಗತಿಯಾಗಿದೆ.) ಪುಸ್ತಕಗಳ ಪ್ರಕಟಣೆಯಲ್ಲಿ ಇಲ್ಲಿಯ ವರೆಗೂ ಉಂಟಾದ ಈ ಹೆಚ್ಚಿಗೆಯನ್ನು ಲೆಕ್ಕಕ್ಕೆ ತೆಗೆಯದಿದ್ದರು ಕೂಡ ನಮ್ಮ ಎದುರಾಳಿಗಳು ಒಂದೊಂದು ಪುಸ್ತಕವನ್ನು ಭಾರತ ಪಾಕಿಸ್ತಾನ ಉಪ ಭೂಖಂಡದ ಪ್ರತಿಯೊಬ್ಬ ಮುಸ್ಲಿಮನ ಕೈಯಲ್ಲಿ ಕೊಟ್ಟಾಗಿದೆ. ಅಲ್ಲಾಹನ ಅಭಿಮಾನ ಉಕ್ಕಿ ಹರಿಯದೆ ಇರುತ್ತಿದ್ದರೆ ಮತ್ತು **ಇನ್ನಾ ಲಹೂ ಲಹಾಫಿಝೂನ್** (ನಿಶ್ಚಯವಾಗಿಯೂ ನಾವು ಅದನ್ನು ಸಂರಕ್ಷಿಸುವೆವು) ಎಂಬ ಅವನ ವಾಗ್ದಾನ ಇಲ್ಲದಿರುತ್ತಿದ್ದರೆ ಇಸ್ಲಾಮ್ ಧರ್ಮ ಲೋಕದಿಂದ ನಾಶವಾಗುತ್ತಿತ್ತು ಮತ್ತು ಅದರ ಅವಶೇಷಗಳು ಕೂಡ ಅಳಿಸಿ ಹೋಗುತ್ತಿತ್ತು ಎಂದು ನೀವು ದೃಢವಾಗಿ ತಿಳಿದುಕೊಳ್ಳಿರಿ. ಆದರೆ ಹಾಗೆ ಎಂದೂ ಸಂಭವಿಸಲು ಸಾಧ್ಯವಿಲ್ಲ. ಅಲ್ಲಾಹನ ಅದೃಶ್ಯ ಹಸ್ತ ಇಸ್ಲಾಮನ್ನು ಸಂರಕ್ಷಿಸುತ್ತಾ ಇದೆ.

(ಮಲ್‌ಫೂಝಾತ್, ಸಂಪುಟ-1, ಪುಟ-73)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತಾನು ವಾದಿಸಿದ ನಂತರ ಅಲ್ಲಾಹನ ಸಹಾಯ ಹೇಗೆ ತನ್ನ ಜೊತೆಗಿದೆ ಎಂದು ತಿಳಿಸಿದರು. ಪವಿತ್ರ ಖುರ್‌ಆನಿನಲ್ಲಿ ಹೇಳಲಾದ ಭವಿಷ್ಯವಾಣಿಗಳು ಅವರ ಪರವಾಗಿ ಹೇಗೆ ಈಡೇರಿದುವು ಎಂದೂ ಮಹ್‌ದೀ ಮತ್ತು ಮಸೀಹ್‌ರ ಪರವಾಗಿ ಹಝ್ರತ್ ಪೈಗಂಬರ್(ಸ) ನುಡಿದ ಭವಿಷ್ಯವಾಣಿಗಳು ಹೇಗೆ ಪೂರ್ತಿಯಾದುವು ಎಂದೂ ಹಝ್ರತ್ ಮಸೀಹ್ ಮೌಊದ್(ಅ) ತಿಳಿಸಿದರು. ನಾನು ಹೇಳಿದಂತೆ ಈ ಸಂಗತಿಗಳು ಅನೇಕ ಸಭೆಗಳಲ್ಲಿ ನೀವು ಆಲಿಸಿರಬಹುದು, ಎಂ.ಟಿ.ಎ.ಯಲ್ಲೂ ಕಾರ್ಯಕ್ರಮಗಳು ಪ್ರಸಾರವಾಗುತ್ತವೆ. ಅದರಲ್ಲೂ ಕೇಳುತ್ತಿರಬಹುದು. ಅದರ ವಿವರಣೆಗಳು ಇರುತ್ತವೆ. ಆದ್ದರಿಂದ ಕೇಳುಗರು ಅದನ್ನು ಆಲಿಸಬೇಕು.

ಈಗ ನಾನು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರು ಸ್ವತಃ ನೋಡಿದ ಅಥವಾ ಅವರು ಇತರರಿಂದ ಆಲಿಸಿದ ಕೆಲವು ವಿಷಯಗಳನ್ನು ವಿವರಿಸುವೆನು. ಇಂತಹ ಸಂಗತಿಗಳನ್ನು ಸ್ವಂತವರೂ ಅನ್ಯರೂ ಅವರೊಡನೆ ಹೇಳಿಕೊಟ್ಟಿದ್ದರು. ಆ ವಿವರಣೆಗಳು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸತ್ಯಸಂಧತೆಯನ್ನು

ಸ್ಪಷ್ಟಪಡಿಸುವುದರೊಂದಿಗೆ ನಮ್ಮನ್ನು ಸುಧಾರಣೆ ಮತ್ತು ನಮ್ಮ ವಿಶ್ವಾಸವನ್ನು ಬಲಿಷ್ಠಗೊಳಿಸಲು ನಮ್ಮ ಗಮನವನ್ನು ಹರಿಸುತ್ತವೆ. ಇವುಗಳನ್ನು ಆಲಿಸಿ ನಮಗೆ ನಮ್ಮ ಸುಧಾರಣೆಯ ಕಡೆಗೆ ಗಮನ ಉಂಟಾಗದಿದ್ದರೆ ಇವುಗಳನ್ನು ಆಲಿಸುವುದರಿಂದ ಯಾವುದೇ ಪ್ರಯೋಜನವಿಲ್ಲ. ಆದ್ದರಿಂದ ಈ ದೃಷ್ಟಿಯಿಂದ ಈ ಸಂಗತಿಗಳನ್ನು ನಾವು ಆಲಿಸಬೇಕು. ನಾವು ನಮ್ಮ ವಿಶ್ವಾಸವನ್ನು ಸುದೃಢಗೊಳಿಸಲು ಮತ್ತು ನಮ್ಮ ವಿಶ್ವಾಸವನ್ನು ಸುದೃಢಗೊಳಿಸಲಿಕ್ಕಿರುವ ಮಾರ್ಗವನ್ನಾಗಿ ಮಾಡಿಕೊಳ್ಳಲು ಈಗಲೂ ಇವುಗಳನ್ನು ಆಲಿಸಬೇಕು.

ಪ್ರವಾದಿಗಳು ಹೇಳುತ್ತಿರುವ ಸೂಕ್ಷ್ಮಜ್ಞಾನದ ಮಾತುಗಳು ಅವರು ಸ್ವತಃ ಹೇಳುವವುಗಳಲ್ಲ; ಬೇರೆ ಯಾರೋ ಪ್ರವಾದಿಗೆ ಕಲಿಸಿಕೊಡುತ್ತಿದ್ದಾರೆ ಎಂದು ಹೇಳುವುದು ಪ್ರವಾದಿಗಳ ಶತ್ರುಗಳ ಸಾಮಾನ್ಯ ರೂಢಿಯಾಗಿದೆ. ಪವಿತ್ರ ಖುರ್‌ಆನಿಗೆ ಸಂಬಂಧಿಸಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವಿರುದ್ಧ ಕೂಡ ಶತ್ರುಗಳು ಇಂತಹ ಆರೋಪವನ್ನು ಮಾಡಿದ್ದಾರೆ. ಆದರೆ ಅದಂತು ಅತುಲ್ಯವಾದ ಒಂದು ಗ್ರಂಥವಾಗಿದೆ ಎಂಬುದು ಅಲ್ಲಾಹನ ಚ್ಯಾಲೇಂಜ್ ಆಗಿದೆ. ಹೇಗಿದ್ದರೂ ಹಝ್ರತ್ ಮಸೀಹ್ ಮೌಊದ್(ಅ)ರಿಗೆ ಸಂಬಂಧಿಸಿ ನಾನು ಪ್ರಸ್ತಾಪಿಸುವೆನು. ಅವರು ಬರಾಹೀನೆ ಅಹ್ಮದಿಯಾ ಬರೆದಾಗ, ಅದರ ಇಂತಿಷ್ಟು ಭಾಗಗಳನ್ನು ಬರೆಯುವೆನು ಎಂದು ಆರಂಭದಲ್ಲಿ ಅವರು ಹೇಳಿದ್ದರು. ಆದರೆ ಅನಂತರ ಅವರಿಗೆ ಅಲ್ಲಾಹನು ಪ್ರವಾದಿತ್ವದ ಸ್ಥಾನವನ್ನು ನೀಡಿದಾಗ ಅವರು ಹೀಗೆ ಹೇಳಿದರು: ಈಗ ಈ ಸಂಗತಿಗಳನ್ನು, ಈ ಕಾರ್ಯಗಳನ್ನು ಅಲ್ಲಾಹನು ತನ್ನ ಸ್ವಂತ ಕೈಯಲ್ಲಿ ತೆಗೆದಿದ್ದಾನೆ ಮತ್ತು ಅವನು ಸ್ಥಿತಿಗತಿಗಳಿಗೆ ಅನುಸಾರ ವಿಷಯಗಳನ್ನು ಕಲಿಸಿ ಕೊಡುವನು. ಅವುಗಳನ್ನೇ ನಾನು ಹೇಳುವೆನು. ಆಗ ವಿರೋಧಿಗಳು ಹೀಗೆ ಆಕ್ಷೇಪವೆತ್ತಿದರು: ಅವರಿಗೆ ಯಾರೋ ಬರೆದು ಕೊಡುತ್ತಿದ್ದರು. ಅದನ್ನು ಅವರು ಹೇಳುತ್ತಿದ್ದರು. ಈ ಕುರಿತು ಹಝ್ರತ್ ಮುಸ್ಲಿಹ್ ಮೌಊದ್(ರ) ಒಂದು ಭಾಷಣದಲ್ಲಿ ಹೀಗೆ ಹೇಳುತ್ತಾರೆ: ಆ ಕಾಲದಲ್ಲಿ ಝುಮೀನ್‌ದಾರ್ ಮತ್ತು ಎಹ್‌ಸಾನ್ ಎಂಬ ವಾರ್ತಾಪತ್ರಿಕೆಗಳು ಇದ್ದುವು. ವಿರೋಧಿಗಳ ಈ ಪತ್ರಿಕೆಗಳಲ್ಲಿ ಕೂಡ ಬರೆಯಲಾಗುತ್ತಿತ್ತು. ಅವುಗಳು ಹೀಗೆ ಬರೆದುವು: ಮೌಲವಿ ಚಿರಾಗ್‌ದೀನ್ ಹೈದರಾಬಾದಿ ಸಾಹಿಬ್‌ರು ಲೇಖನಗಳನ್ನು ಬರೆದು ಹಝ್ರತ್ ಮಸೀಹ್ ಮೌಊದ್(ಅ)ರಿಗೆ ಕಳುಹಿಸುತ್ತಿದ್ದರು. ಅವುಗಳನ್ನು ಹಝ್ರತ್ ಮಸೀಹ್ ಮೌಊದ್(ಅ) ಬರಾಹೀನೆ ಅಹ್ಮದಿಯದಲ್ಲಿ ಬರೆದು ಪ್ರಕಟಿಸುತ್ತಿದ್ದರು. ಮೌಲವಿ ಸಾಹಿಬ್‌ರಿಂದ ಲೇಖನಗಳ ಪರಂಪರೆ ಮುಂದುವರೆದಷ್ಟು ಕಾಲದ ವರೆಗೆ ಹಝ್ರತ್ ಮಸೀಹ್ ಮೌಊದ್(ಅ) ಸಹ ಪುಸ್ತಕಗಳನ್ನು ಬರೆಯುತ್ತಿದ್ದರು. ಆದರೆ ಮೌಲವಿ ಸಾಹಿಬ್‌ರು ಲೇಖನಗಳನ್ನು ಕಳುಹಿಸುವುದನ್ನು ನಿಲ್ಲಿಸಿದಾಗ ಹಝ್ರತ್ ಮಸೀಹ್ ಮೌಊದ್(ಅ)ರ ಗ್ರಂಥ ಕೂಡ ಮುಕ್ತಾಯಗೊಂಡಿತು. ಈ ಆಕ್ಷೇಪಕ್ಕೆ ಉತ್ತರವಾಗಿ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಮೌಲವಿ ಚಿರಾಗ್ ಅಲಿ ಸಾಹಿಬ್‌ರಿಗೆ ಏನಾಯಿತು ಎಂದು ಗೊತ್ತಾಗುತ್ತಿಲ್ಲ. ಅವರು ಬರೆದು ಕೊಡುತ್ತಿದ್ದರು ಎಂದು ಜನರು ಹೇಳುತ್ತಾರೆ. ಮೌಲವಿ ಚಿರಾಗ್ ಅಲಿ ಸಾಹಿಬ್‌ರಿಗೆ ಸಂಭವಿಸಿದುದಾದರೂ ಏನು! ಅವರಿಗೆ ಹೊಳೆದ ಅತ್ಯುತ್ತಮ ಸತ್ಯಾಂಶಗಳನ್ನು ಬರೆದು ಬರೆದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಕಳುಹಿಸುತ್ತಾರೆ. ಸಾಮಾನ್ಯವಾದ ವಿಷಯಗಳನ್ನು ತನ್ನ ಬಳಿಯೇ ಇಟ್ಟುಕೊಳ್ಳುತ್ತಿದ್ದಾರೆ! ಅಂತೂ ಮೌಲವಿ ಚಿರಾಗ್ ಅಲಿ ಸಾಹಿಬ್ ಕೂಡ ಲೇಖಕರಾಗಿದ್ದಾರೆ. ಬರಾಹೀನೆ ಅಹ್ಮದಿಯಾದ ಮುಂದೆ ಅವರ ಗ್ರಂಥಗಳನ್ನು ಇರಿಸಿ ನೋಡಬೇಕಾಗಿದೆ. ಬರಾಹೀನೆ ಅಹ್ಮದಿಯಕ್ಕೆ ಸರಿಸಾಟಿಯಾಗಿ ಅವುಗಳು ಇವೆಯೇ ಎಂದು ನೋಡಿರಿ. ಇತರರಿಗೆ ಅತುಲ್ಯವಾದ ಲೇಖನಗಳನ್ನು ಕೊಡುವ ವ್ಯಕ್ತಿ ತನ್ನ ಹೆಸರಲ್ಲಿ ಯಾವುದಾದರೂ ಲೇಖನಗಳನ್ನು ಬರೆಯುವಾಗ ಅಂತಹ ಶ್ರೇಷ್ಠತೆ ಆ ಲೇಖನಗಳಲ್ಲಿ ಕಾಣಲು ಸಿಗದೇ ಇರಲು ಹೇಗೆ ಸಾಧ್ಯ? ಮೊತ್ತಮೊದಲು ಗಮನಿಸಬೇಕಾದ ವಿಷಯವೇನೆಂದರೆ ಮೌಲವಿ ಚಿರಾಗ್ ಅಲಿ ಸಾಹಿಬರಿಗೆ ಲೇಖನಗಳನ್ನು ಬರೆದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಕಳುಹಿಸುವ ಆವಶ್ಯಕತೆ ಏನಿತ್ತು? ಅವರು ಹಾಗೆ ಬರೆದು ಕಳುಹಿಸುವವರಾಗಿದ್ದರೆ ಉತ್ತಮವಾದ ಬರಹಗಳನ್ನು ತಾನು ಇರಿಸಿಕೊಂಡು ಸಾಮಾನ್ಯವಾದ ಬರಹಗಳನ್ನು ಅನ್ಯರಿಗೆ ಕೊಡುತ್ತಿದ್ದರಲ್ಲವೇ? ಉದಾಹರಣೆಗೆ ದೌಕ್ ಎಂಬ ಹಿಂದಿನ ಕವಿಯು ಬಹಾದೂರ್ ಶಾಹ್ ಝುಫರ್ ಎಂಬ ಹೆಸರಿನ ಕವಿಗೆ ಕವಿತೆಗಳನ್ನು ಬರೆದು ಕೊಡುತ್ತಿದ್ದರು ಎಂಬುದು ಎಲ್ಲರಿಗೂ ಗೊತ್ತಿದೆ. ಆದರೆ ದೀವಾನೇ ದೌಕ್ ಮತ್ತು ದೀವಾನೆ ಝುಫರ್ ಎಂಬೀ ಕವಿತೆಯ ಸಂಕಲನಗಳು ಇಂದು ಲಭ್ಯವಿವೆ. ಎರಡನ್ನೂ ನೋಡುವುದಾದರೆ, ಸ್ಪಷ್ಟವಾಗಿ ತಿಳಿದುಬರುವ ಸಂಗತಿಯೇನೆಂದರೆ, ದೌಕಿನ ಪದ್ಯಗಳಲ್ಲಿ ಕಂಡುಬರುವ ಭಾಷಾ ವೈಶಿಷ್ಟ್ಯಗಳು ಝುಫರಿನ ಪದ್ಯಗಳಲ್ಲಿ ಕಂಡುಬರುವುದಿಲ್ಲ. ಇದರಿಂದ ಗೊತ್ತಾಗುವುದೇನೆಂದರೆ, ದೌಕ್ ಝುಫರಿಗೆ ಏನಾದರೂ ಕೊಡುತ್ತಿದ್ದರು ಕೂಡ ತನ್ನ ಅಳಿದುಳಿದ ಕವಿತೆಗಳನ್ನು ಅವರಿಗೆ ಕೊಡುತ್ತಿದ್ದರು, ಉತ್ತಮವಾದುದನ್ನು ಕೊಡುತ್ತಿರಲಿಲ್ಲ. ಝುಫರ್ ಅರಸನಾಗಿದ್ದರೂ ಕೂಡ. ಒಟ್ಟಿನಲ್ಲಿ, ಮೌಲವಿ ಚಿರಾಗ್ ಅಲಿ ಸಾಹಿಬ್‌ರು ಹಝ್ರತ್ ಮಸೀಹ್ ಮೌಊದ್(ಅ)ರಿಗೆ ಲೇಖನಗಳನ್ನು ಕಳುಹಿಸುತ್ತಿದ್ದರೆ, ಜ್ಞಾನದ ಅತ್ಯುತ್ತಮ ಅಂಶಗಳನ್ನು ತನ್ನ ಜೊತೆಗೆ ಇರಿಸಿ ಸಾಮಾನ್ಯ ಅರಿವಿನ ಮಾತುಗಳನ್ನು ಹಝ್ರತ್ ಮಸೀಹ್ ಮೌಊದ್‌ರಿಗೆ ಬರೆದು ಕೊಟ್ಟಿರಬಹುದು ಎಂದು ಸಾಮಾನ್ಯ ಬುದ್ಧಿಯುಳ್ಳ ಪ್ರತಿಯೊಬ್ಬನು ತಿಳಿದುಕೊಳ್ಳಬಹುದು. ಆದರೆ ಮೌಲವಿ ಚಿರಾಗ್ ಅಲಿ ಸಾಹಿಬ್‌ರ ಪುಸ್ತಕಗಳೂ ಇವೆ, ಹಝ್ರತ್ ಮಸೀಹ್ ಮೌಊದ್(ಅ)ರ ಗ್ರಂಥಗಳೂ ಇವೆ. ಅವೆರಡನ್ನು ಸೇರಿಸಿ ನೋಡಿರಿ. ಯಾವುದೇ ಸಂಬಂಧ ಎರಡರಲ್ಲಿ ಇಲ್ಲ. ಮೌಲವಿ ಚಿರಾಗ್ ಅಲಿ ಸಾಹಿಬ್‌ರಂತು ತನ್ನ ಪುಸ್ತಕಗಳಲ್ಲಿ ಕೇವಲ ಬೈಬಲಿನ ಉಲ್ಲೇಖಗಳನ್ನು ಒಟ್ಟುಗೂಡಿಸಿ ಬರೆದಿರುವರು. ಆದರೆ ಹಝ್ರತ್ ಮಸೀಹ್ ಮೌಊದ್(ಅ)ರಂತು ಸಾವಿರದ ಮುನ್ನೂರು ವರ್ಷಗಳಲ್ಲಿ ಯಾವನೇ ಮುಸ್ಲಿಮನು ಹೇಳಿರದಂತಹ ಪವಿತ್ರ ಖುರ್‌ಆನಿನ ಜ್ಞಾನಗಳನ್ನು ಮುಂದಿರಿಸಿದರು. ಆ ಜ್ಞಾನಗಳ ಮತ್ತು ಅರಿವಿನ ಸಾವಿರದ ಒಂದು ಪಾಲಷ್ಟು ಕೂಡ ಅವರ ಪುಸ್ತಕಗಳಲ್ಲಿ ಇಲ್ಲ. (ಫ಼ ಼ಾಇಲುಲ್ ಖುರ್‌ಆನ್, ಅನ್ವಾರುಲ್ ಉಲೂಮ್, ಸಂಪುಟ-14, ಪುಟ-350)

ಶತ್ರುಗಳ ಬೊಬ್ಬೆ ಮತ್ತು ವಿರೋಧಗಳ ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ವಾದಿಸಿದ ಕಾಲದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮತ್ತು ಅವರನ್ನು ನಂಬಿದವರ ಸ್ಥಿತಿ ಬಾಹ್ಯವಾಗಿ ಬಹಳ ಬಲಹೀನವಾಗಿತ್ತು.

ಹಝ್ರತ್ ಮಸೀಹ್ ಮೌಊದ್(ಅ) ವಾದಿಸುವುದಕ್ಕೆ ಮುಂಚಿತವಾಗಿ ನನ್ನ ಜನನವಾಗಿತ್ತು. ವಾದದ ಆರಂಭದ ದಿನಗಳನ್ನು ನಾನು ಕಂಡಿದ್ದೇನೆ. ಅದು ಜಮಾಅತಿನ ಬಲಹೀನ ಅವಸ್ಥೆಯ ಕಾಲವಾಗಿತ್ತು. ಮೌಲವಿಗಳು ತರಹ ತರಹವಾಗಿ ಜನರನ್ನು ಉತ್ತೇಜಿಸುತ್ತಲೇ ಇದ್ದರು. ಸಾಧ್ಯವಾದ ಎಲ್ಲ ರೀತಿಯಲ್ಲೂ ದುಃಖ ಮತ್ತು ತೊಂದರೆ ನೀಡಲು ಶ್ರಮಿಸುತ್ತಿದ್ದರು. (ಖುತ್ಬಾತೆ ಮಹ್ಮೂದ್, ಸಂಪುಟ-8, ಪುಟ-248)

ಆದರೆ ಯಾವುದೇ ತಡೆಯನ್ನು ಉಂಟುಮಾಡಲು ಅವರಿಗೆ ಸಾಧ್ಯವಾಗಲಿಲ್ಲ. ಅಲ್ಲಾಹನ ಕೆಲಸ ಪೂರ್ತಿಯಾಗುತ್ತಲೇ ಹೋಯಿತು.

ಶತ್ರುಗಳ ವಿರೋಧಗಳ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಪ್ರತಿಕ್ರಿಯೆ ಹೇಗಿತ್ತೆಂಬ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅನೇಕ ಸಲ ಹೀಗೆ ಹೇಳುತ್ತಿದ್ದುದನ್ನು ನಾನು ಆಲಿಸಿದ್ದೇನೆ: ಅವರು ಹೇಳುತ್ತಿದ್ದರು, ಜನರು ಬೈಯುತ್ತಾ ಇರುವಾಗ ಕೂಡ ನನಗೆ ಅನಿಸುವುದೇನೆಂದರೆ ಈ ಜನರು ತಮ್ಮ ಅಂತಿಮ ಗತಿಯನ್ನು ಏಕೆ ಹಾಳುಗೆಡವುತ್ತಿದ್ದಾರೆ. ಅವರು ನಮ್ಮನ್ನು ಬೈಯ್ಯದಿದ್ದರೂ ನಮಗೆ ಅಸಂತೃಪ್ತಿ ಉಂಟಾಗುತ್ತದೆ. ಏಕೆಂದರೆ ವಿರೋಧವಿಲ್ಲದಿದ್ದರೆ ಜಮಾಅತ್ ಅಭಿವೃದ್ಧಿ ಗಳಿಸಲಾರದು. ಶತ್ರುಗಳು ಬೈಯುತ್ತಾ ಇರುವಾಗ ಜಮಾಅತಿನ ಸಂದೇಶ ಈ ವಿರೋಧದ ಕಾರಣ ಅನ್ಯರಿಗೆ ತಲಪುತ್ತದೆ. ಆದುದರಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಬೈಗುಳಗಳಿಂದ ಕೂಡ ನಮಗೆ ರಸಾನುಭೂತಿ ಉಂಟಾಗುತ್ತದೆ. ಆದುದರಿಂದ ಜನರ ಆಕ್ಷೇಪಗಳ ಬಗ್ಗೆ ಮತ್ತು ನಿಂದನೆಗಳ ಬಗ್ಗೆ ಲಕ್ಷ್ಯ ನೀಡಬಾರದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪಂಜಾಬಿ ಭಾಷೆಯ ಒಂದು ಗಾದೆ ಹೇಳುತ್ತಿದ್ದರು. ಅದರ ಅರ್ಥ ಹೀಗೆ: ಒಂಟೆ ಚೀರುತ್ತಾ ಇದ್ದರೂ ಅದರ ಮಾಲಿಕ ಅದರ ಮೇಲೆ ಕೈ ಸವರುತ್ತಾ ಸಾಮಗ್ರಿಗಳನ್ನು ಹೇರುತ್ತಾ ಹೋಗುತ್ತಾನೆ. ಆದ್ದರಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಉಪದೇಶಿಸಿದರು: ಜನರು ನಮ್ಮ ಬಗ್ಗೆ ಏನು ಹೇಳಿದರೂ ನೀವು ಮೃದುವಾಗಿಯೂ ಪ್ರೀತಿಯಿಂದಲೂ ವರ್ತಿಸಿರಿ. (ಖುತ್ಬಾತೆ ಮಹ್ಮೂದ್, ಸಂಪುಟ-15, ಪುಟ-265)

ಅಲ್ಲಾಹನು ಅನುಗ್ರಹಿಸುವನು. ಅವರಿಂದಲೇ ಜಮಾಅತ್ ಸ್ವೀಕಾರ ಮಾಡುವವರು ಬರುವರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ವಾದಿಸಿದಾಗ ಅವರನ್ನು ಅನುಸರಿಸಿದವರು ಕೆಲವು ಜನರು ಮಾತ್ರವಾಗಿದ್ದರು. ಆದರೆ ಆಥಮ್‌ನೊಂದಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಸಂವಾದ ನಡೆಸಿದಾಗ ಜಮಾಅತಿನ ಜನರ ಮೇಲೆ ಒಂದು ಪರೀಕ್ಷೆ ಬಂದೆರಗಿತು. ಹಝ್ರತ್ ಮಸೀಹ್ ಮೌಊದ್(ಅ)ರ ಭವಿಷ್ಯವಾಣಿಯು ತನ್ನ ಬಾಹ್ಯವಾದ ರೂಪದಲ್ಲಿ ಈಡೇರಿಲ್ಲವೆಂದು ಜನರು ತಿಳಿದರು. ಅನಂತರ ಲೇಖ್‌ರಾಮ್‌ನನ್ನು ಎದುರಿಸಿದಾಗ, ಅವರ ಭವಿಷ್ಯವಾಣಿ ಅತ್ಯಂತ ವೈಭವಶಾಲಿಯಾಗಿ ಈಡೇರಿದರು ಕೂಡ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ

ವಿರುದ್ಧ ಹಿಂದುಗಳಲ್ಲಿ ಅತಿಯಾದ ವಿರೋಧ ತಲೆದೋರಿತು. ಅದೇ ರೀತಿಯಲ್ಲಿ ಮೌಲವಿ ಮುಹಮ್ಮದ್ ಹುಸೈನ್ ಬಟಾಲವಿಯ ಫತ್ವಗಳ ಸಮಯ ಬಂದಾಗ ಜಮಾಅತಿನ ಮೇಲೆ ಒಂದು ಪರೀಕ್ಷಣೆ ಬಂದಿತು. ಅನಂತರ ಡಾಕ್ಟರ್ ಅಬ್ದುಲ್ ಹಕೀಮ್‌ರ ಮತತ್ಯಾಗದ ಕಾಲದಲ್ಲೂ ಜಮಾಅತ್ ಪರೀಕ್ಷೆಗೆ ಪಾತ್ರವಾಯಿತು. ಹೀಗೆ ಬೇರೆ ಬೇರೆ ಸಮಯಗಳಲ್ಲಿ ಎದ್ದ ವಿಪತ್ತುಗಳ ಸಮಯದಲ್ಲಿ, ಈಗಂತು ಅಹ್ಮದಿಯ್ಯತ್ ಕೊನೆಗೊಳ್ಳುವುದು ಎಂದು ನೋಡುಗರು ಭಾವಿಸಿದ್ದರು. ಆದರೆ ಅಲ್ಲಾಹನು ಈ ಎಲ್ಲ ಪಿತೂರಿಗಳನ್ನು ಅಳಿಸಿ ಬಿಡುವ ವ್ಯವಸ್ಥೆ ಮಾಡಿದನು. ಆ ಪಿತೂರಿಗಳು ಜಮಾಅತನ್ನು ನಾಶಮಾಡುವುದಕ್ಕೆ ಬದಲಾಗಿ ಜಮಾಅತಿನ ಅಭಿವೃದ್ಧಿಗೆ ಮತ್ತು ಗೌರವಕ್ಕೆ ಹೇತುಗಳಾದುವು. ಅದೇ ರೀತಿಯಲ್ಲಿ ಈಗಲೂ ಆಗುತ್ತಿದೆ. ಹಝ್ರತ್ ಮಸೀಹ್ ಮೌಊದ್(ಅ)ರ ಕಾಲದಲ್ಲಿ ಪಿತೂರಿಗಳು ತಲೆಯೆತ್ತಿತ್ತು. ಜಮಾಅತಿನ ವಿರುದ್ಧ ಪಿತೂರಿ ಎದ್ದಾಗ ಈಗ ಅಹ್ಮದಿಯ್ಯತ್ ಕೊನೆಗೊಳ್ಳುವುದು ಎಂದು ಜನರು ಭಾವಿಸಿದರು. ಆದರೆ ಅಳಿಸಿ ಹೋಗುವುದಕ್ಕೆ ಬದಲಾಗಿ ಅಲ್ಲಾಹನ ಅನುಗ್ರಹದಿಂದ ಜಮಾಅತ್ ಮೊದಲಿಗಿಂತ ಹೆಚ್ಚು ಪ್ರಗತಿಗೊಂಡಿತು.

(ಖುತ್ಬಾತೆ ಮಹ್ಮೂದ್, ಸಂಪುಟ–33, ಪುಟ–298)

ಇದು ಜಮಾಅತಿನ ಚರಿತ್ರೆಯಾಗಿದೆ. ದೈವಿಕ ಜಮಾಅತಿನ ಚರಿತ್ರೆ ಇದೇ ಆಗಿರುತ್ತದೆ.

ವಿರೋಧಗಳ ರೀತಿಯೂ ಜಾರಿಯಲ್ಲಿರುತ್ತದೆ. ಈಗಲೂ ಹಾಗೆಯೇ ಆಗಿದೆ. ಇಂತಹ ವಿರೋಧಗಳಿಂದ ಸಾಗುತ್ತಾ ಜಮಾಅತ್ ಪ್ರಗತಿ ಹೊಂದುತ್ತಲೇ ಹೋಗುತ್ತದೆ. ಈಗಲೂ ಇನ್‌ಶಾ ಅಲ್ಲಾಹ್ ಪ್ರಗತಿ ಹೊಂದುವುದು ಮತ್ತು ಹೊಂದುತ್ತಿದೆ. ಎದುರಾಳಿಗಳು ಮತ್ತು ಕಪಟವಿಶ್ವಾಸಿಗಳು ನಮ್ಮ ವಿರುದ್ಧ ಕಠಿನ ಪ್ರಯತ್ನ ಮಾಡುತ್ತಾರೆ. ಆದರೆ ಅಲ್ಲಾಹನು ತನ್ನ ಕೆಲಸವನ್ನು ಈಡೇರಿಸುತ್ತಾನೆ. ಅವನು ಮಾಡಿದ ವಾಗ್ದಾನವನ್ನು ಖಂಡಿತ ಈಡೇರಿಸುವನು. ಇನ್‌ಶಾ ಅಲ್ಲಾಹ್.

ವಿರೋಧಗಳ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಒಂದು ಭಾಷಣದಲ್ಲಿ ಹೀಗೆ ಹೇಳಿದರು: ಒಬ್ಬ ಅಹ್ಮದಿಯೇತರ ವ್ಯಕ್ತಿ ಜಮಾಅತಿಗೆ ವಿರುದ್ಧವಾಗಿರುವ ಮಾತುಗಳನ್ನು ಆಲಿಸುವಾಗ ಹೀಗೆ ಯೋಚಿಸುತ್ತಾನೆ: ಈ ಜನರು ಇಷ್ಟು ಕೊಳಕು ಜನರಾಗಿರುವರು. ನಾನು ಸ್ವತಃ ಅವರನ್ನೊಮ್ಮೆ ನೋಡುವೆನು. ಅವನು ಜಮಾಅತನ್ನು ಸಮೀಪದಿಂದ ನೋಡುವಾಗ ಅವನು ಆಶ್ಚರ್ಯಗೊಳ್ಳುತ್ತಾನೆ. ನನ್ನೊಡನೆ ಅಹ್ಮದಿಯರ ವಿರೋಧಿಗಳು ಹೇಳಿದ ವಿಷಯಗಳು ಬೇರೆಯೇ ಆಗಿವೆ. ಈ ಜಮಾಅತಿನವರು ಹೇಳುವ ಮಾತುಗಳು ವಿರೋಧಿಗಳು ಹೇಳಿದ ಮಾತುಗಳಿಗೆ ಸಂಪೂರ್ಣ ವಿರುದ್ಧವಾಗಿವೆ ಎಂದು ತಿಳಿದುಕೊಂಡು ಸನ್ಮಾರ್ಗ ಗಳಿಸುತ್ತಾನೆ.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ನನಗೆ ನೆನಪಿದೆ. ನಾನಾಗ ಸಣ್ಣವನಾಗಿದ್ದೆ. ಹಝ್ರತ್ ಮಸೀಹ್ ಮೌಊದ್(ಅ) ಮಸೀದಿಯಲ್ಲಿ ಕುಳಿತುಕೊಂಡಿದ್ದರು. ಜನರು ಕುಳಿತುಕೊಂಡಿದ್ದರು. ರಾಮ್‌ಪುರ ಪಟ್ಟಣದಿಂದ ಒಬ್ಬ ಗಣ್ಯರು ಬಂದಿದ್ದರು. ಅವರು ಲಕ್ನೌದವರಾಗಿದ್ದರು. ಆದರೆ ರಾಮ್‌ಪುರದಲ್ಲಿ ನೆಲೆಸಿದ್ದರು. ಸಾಹಿತಿ ಮತ್ತು ಕವಿಯಾಗಿದ್ದರು. ಅವರು ಸ್ವತಃ ಪರಿಚಯ ಪಡಿಸಿದರು. ಹಝ್ರತ್ ಮಸೀಹ್ ಮೌಊದ್(ಅ) ಕೇಳಿದರು: ಇಲ್ಲಿಗೆ ಬರಲು ಹೇಗೆ ಮನಸ್ಸಾಯಿತು? ಅವರು ಹೇಳಿದರು: ನಾನು ಬೈಅತ್ ಮಾಡಲು ಬಂದಿದ್ದೇನೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: ರಾಮ್‌ಪುರ್‌ನಲ್ಲಿ ನಮ್ಮ ಜಮಾಅತಿನ ಜನರು ಬಹಳ ಕಡಿಮೆ. ತಬ್ಲೀಗ್ ಕೂಡ ಅಲ್ಲಿ ಬಹಳ ಕಡಿಮೆ ನಡೆಯುತ್ತವೆ. ಹೀಗಿರುವಾಗ ಈ ಕಡೆ ಬರಲು ನಿಮ್ಮನ್ನು ಯಾರು ಹುರಿದುಂಬಿಸಿದರು? ಆಗ ಅವರು ಹೇಳಿದರು: ನಾನು ಇಲ್ಲಿಗೆ ಬರಲು ಕಾರಣಕರ್ತರಾದ ವ್ಯಕ್ತಿ ಮೌಲವಿ ಸನಾವುಲ್ಲಾ ಸಾಹಿಬರು ಆಗಿರುವರು. ಆಗ ಅದು ಹೇಗೆ ಎಂದು ಹಝ್ರತ್ ಮಸೀಹ್ ಮೌಊದ್(ಅ) ನಗುತ್ತಾ ಅವರೊಡನೆ ಕೇಳಿದರು. ಅವರು ಹೇಳಿದರು: ನಾನು ಆ ಮೌಲವಿಯ ಪುಸ್ತಕಗಳಲ್ಲಿ ನಿಮ್ಮ ವಿರುದ್ಧ ಬರೆದುದನ್ನು ಓದಿದೆ. ಅವರು ನೀಡಿದ ಉದ್ಧರಣಿಗಳನ್ನು ಪರಿಶೀಲಿಸಲು ನಿಮ್ಮ ಗ್ರಂಥಗಳನ್ನು ನೋಡಿದೆ. ಆಗ ನನಗೆ ತಿಳಿಯಿತು, ನೀವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಘನತೆ ಮತ್ತು ಭವ್ಯತೆ ಬಗ್ಗೆ ಏನೆಲ್ಲ ಬರೆದಿರುವಿರೋ ಅವು ಆ ಜನರ ಹೃದಯಗಳಲ್ಲಿ ತೀರಾ ಇಲ್ಲ. ಅದಲ್ಲದೇ ನನಗೆ ಫಾರಸಿ ಭಾಷೆಯೊಂದಿಗೆ ಅಭಿರುಚಿಯಿತ್ತು. ಎಲ್ಲಿಂದಲೋ ದುರ್ರೇಸಮೀನ್ ಫಾರಸಿ ಲಭಿಸಿತು. ಅದನ್ನು ನಾನು ಓದಿದೆ. ಅದನ್ನು ಓದಿದ ನಂತರ ನನ್ನ ಹೃದಯ ಸಂಪೂರ್ಣವಾಗಿ ಸ್ವಚ್ಛವಾಯಿತು. ಈಗ ಹೋಗಿ ಬೈಅತ್ ಮಾಡುವೆನು ಎಂದು ಯೋಚಿಸಿದೆ. ಒಟ್ಟಿನಲ್ಲಿ ವಿರೋಧಗಳು ಪಿತೂರಿಗೆ ಕಾರಣವಾಗುವ ರೀತಿಯಲ್ಲೇ ಪ್ರಯೋಜನಕಾರಿಯೂ ಆಗಿರುತ್ತವೆ. (ಚಶ್ಮ ಎ ಹಿದಾಯತ್, ಅನ್ವಾರುಲ್ ಉಲೂಮ್, ಸಂಪುಟ–22, ಪುಟ–433–435)

ಆದ್ದರಿಂದ ಈ ಎರಡೂ ಸ್ಥಿತಿಗಳನ್ನು ಮುಂದಿರಿಸುತ್ತಾ ನಾವು ಕೂಡ ಯುಕ್ತಿಯಿಂದ ತಬ್ಲೀಗ್ ಮಾಡಬೇಕು.

ಪ್ರವಾದಿಯ ವಿರೋಧ ಆಗದಿದ್ದರೆ ಕೂಡ ಅವರು ದುಃಖಿತರಾಗುತ್ತಾರೆ. ಏಕೆಂದರೆ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದಂತೆ ವಿರೋಧವೇ ಅಭಿವೃದ್ಧಿಯ ಮಾರ್ಗವಾಗಿದೆ. ಈ ವಿಷಯವನ್ನು ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಈಜಿಪ್ಟಿನ ಆಡಳಿತ ತನ್ನ ಕಾಲದಲ್ಲಿ ಅತ್ಯಂತ ಪ್ರಸಿದ್ಧ ಆಡಳಿತವಾಗಿತ್ತು. ಅದರ ಅರಸ ತನ್ನ ಶಕ್ತಿ ಮತ್ತು ಸಾಮರ್ಥ್ಯದ ಬಗ್ಗೆ ಹೆಮ್ಮೆಪಡುತ್ತಿದ್ದನು. ಫಿರ್‌ಔನಿನ ಕಾಲದಲ್ಲಿ. ಅಂತಹ ಅರಸನ ಮುಂದೆ ಹಝ್ರತ್ ಮೂಸಾ(ಅ)ರ ಯಾವುದೇ ಬೆಲೆಯಿರಲಿಲ್ಲ. ಅವರು ಅರಸನ ಬಳಿಗೆ ಹೋದಾಗ, ಅರಸನು ಮೂಸಾ(ಅ)ರನ್ನು ಬೆದರಿಸಿದರು ಮತ್ತು ಹೆದರಿಸಿದರು. ಅವರ ಸಮುದಾಯವನ್ನು ನಾಶಮಾಡುವುದಾಗಿ ಹೇಳಿದನು. ತನ್ನ ಕೆಲಸದಿಂದ ಹಿಂದೆ ಸರಿಯದಿದ್ದರೆ, ಅವರನ್ನು ಕೂಡ ಕೊಲ್ಲುವುದಾಗಿ ಹೇಳಿದರು. ಆದರೆ ಹಝ್ರತ್ ಮೂಸಾ(ಅ) ಹಿಂದೆ ಸರಿಯಲಿಲ್ಲ. ಅವರು ಹೇಳಿದರು: ಅಲ್ಲಾಹನು ನನ್ನೊಡನೆ ಪ್ರಚಾರ ಮಾಡಲು ಆದೇಶಿಸಿದ ಸಂದೇಶವನ್ನು ನಾನು ಹರಡುವೆನು. ಲೋಕದ ಯಾವುದೇ ಶಕ್ತಿಗೆ ಅದನ್ನು ತಡೆಯಲು ಸಾಧ್ಯವಲ್ಲ. ಇದೇ ಸ್ಥಿತಿ ಹಝ್ರತ್ ಈಸಾ(ಅ)ರದ್ದಾಗಿದೆ. ಇದೇ ಸ್ಥಿತಿ ಹಝ್ರತ್ ಪೈಗಂಬರ್(ಸ)ರದ್ದಾಗಿದೆ. ಇದೇ ಸ್ಥಿತಿಯಲ್ಲಿ ನಾವು ಹಝ್ರತ್ ಮಸೀಹ್ ಮೌಊದ್(ಅ)ರನ್ನು ನೋಡಿದ್ದೇವೆ. ಸಂಪೂರ್ಣ ಸಮುದಾಯದಲ್ಲಿ ಅವರನ್ನು ವಿರೋಧಿಸಲಾಯಿತು. ಆಡಳಿತವೂ ಒಂದು ರೀತಿಯಲ್ಲಿ ಅವರ ವಿರೋಧಿಯಾಗಿತ್ತು. ಕೊನೆಯಲ್ಲಿ ವಿರೋಧವನ್ನು ಅದು ಬಿಟ್ಟಿತ್ತು. ಹೇಗಿದ್ದರೂ ಸಮುದಾಯ ಅವರ ವಿರೋಧಿಯಾಗಿತ್ತು. ಎಲ್ಲ ಧರ್ಮಾವಲಂಬಿಗಳು ಅವರ ವಿರೋಧಿಯಾಗಿದ್ದರು. ಮೌಲವಿಯರು ಅವರ ವಿರೋಧಿಗಳಾಗಿದ್ದರು. ಸರದಾರರು ಮತ್ತು ಜನಸಾಮಾನ್ಯರು ಅವರ ವಿರೋಧಿಗಳಾಗಿದ್ದರು. ಅಮೀರರು ಮತ್ತು ನೇತಾರರು ಅವರ ಶತ್ರುಗಳಾದರು. ಒಟ್ಟಿನಲ್ಲಿ ಎಲ್ಲ ದಿಕ್ಕುಗಳಿಂದಲೂ ವಿರೋಧದ ಒಂದು ಅಲೆ ಎದ್ದಿತ್ತು. ಜನರು ಅವರನ್ನು ಬಹಳವಾಗಿ ತಿಳಿಹೇಳಲು ಬಂದರು.

ನೀವು ನಿಮ್ಮ ವಾದದಲ್ಲಿ ಸ್ವಲ್ಪ ಮಟ್ಟಿಗೆ ಕೊರತೆಯನ್ನು ಮಾಡಿರಿ ಎಂದು ಕೆಲವರು ಸ್ನೇಹಿತರಂತೆ ಹೇಳಿದರು. ನೀವು ಇಂತಿಂತಹ ಸಂಗತಿಗಳನ್ನು ಕೈಬಿಟ್ಟರೆ ಜನರು ನಿಮ್ಮ ಜಮಾಅತಿನಲ್ಲಿ ಸೇರುವರು ಎಂದು ಕೆಲವರು ಹೇಳಿದರು. ಆದರೆ ಹಝ್ರತ್ ಮಸೀಹ್ ಮೌಊದ್(ಅ) ಇವರ ಯಾರ ಮಾತಿನ ಪರಿವೆ ಮಾಡಲಿಲ್ಲ. ಸದಾ ತನ್ನ ವಾದವನ್ನು ಮುಂದಿರಿಸುತ್ತಾ ಇದ್ದರು. ಅದರ ಬಗ್ಗೆ ಗದ್ದಲ ಏಳುತ್ತಿತ್ತು.

ಅಹ್ಮದಿಯರನ್ನು ಹೊಡೆಯಲಾಗುತ್ತಿತ್ತು, ಕೊಲ್ಲಲಾಗುತ್ತಿತ್ತು. ಆದರೆ ಈ ಎಲ್ಲ ಕಷ್ಟತೆಗಳಿದ್ದರೂ, ಬಾಹ್ಯವಾದ ವಸ್ತುಗಳಿಂದ ತಡೆಯಲು ಸಾಧ್ಯವಿಲ್ಲದಂತಹ ಒಂದು ಲೋಕದೊಂದಿಗೆ ಅವರ ಮುಖಾಮುಖಿಯಾಗುತ್ತಿದ್ದರೂ ಹಝ್ರತ್ ಮಸೀಹ್ ಮೌಊದ್(ಅ) ತನ್ನ ಹೋರಾಟವನ್ನು ಮುಂದುವರೆಸಿದರು. ನನಗೆ ಚೆನ್ನಾಗಿ ನೆನಪಿದೆ. ಹಝ್ರತ್ ಮಸೀಹ್ ಮೌಊದ್(ಅ)ರಿಂದ ನಾನು ಅನೇಕ ಬಾರಿ ಆಲಿಸಿದ್ದೇನೆ. ಅವರು ಹೀಗೆ ಹೇಳುತ್ತಿದ್ದರು: ಪ್ರವಾದಿಯ ಉದಾಹರಣೆ, ಜನರು ಹೇಳುವ ಒಂದು ಕಥೆಯಂತಾಗಿದೆ. ಅದೇನೆಂದರೆ, ಒಂದು ಗ್ರಾಮದಲ್ಲಿ ಕುಷ್ಠ ರೋಗಿಯಾದ ಒಬ್ಬಳು ಮಹಿಳೆಯಿದ್ದಳು. ಅವಳು ಮನೆಯಿಂದ ಹೊರಗೆ ಬರುವಾಗ ಸಣ್ಣ ಹುಡುಗರು ಒಟ್ಟುಸೇರಿ ಅವಳನ್ನು ತೊಂದರೆಪಡಿಸುತ್ತಿದ್ದರು. ಅವರನ್ನು ಅಪಹಾಸ್ಯ ಮಾಡುತ್ತಿದ್ದರು, ಪದೇ ಪದೇ ಕಷ್ಟತೆಗೆ ಒಳಪಡಿಸುತ್ತಿದ್ದರು. ಅವಳು ಕೂಡ ಅವರ ಎದುರಾಗಿ ಹುಡುಗರನ್ನು ಬೈಯ್ಯುತ್ತಿದ್ದಳು. ಶಾಪ ಪ್ರಾರ್ಥನೆ ಮಾಡುತ್ತಿದ್ದಳು. ಕೊನೆಗೆ ಗ್ರಾಮವಾಸಿಗಳು ಪರಸ್ಪರ ಸಮಾಲೋಚನೆ ನಡೆಸಿ ಹೀಗೆ ಹೇಳಿದರು: ಈ ಮಹಿಳೆ ದೌರ್ಜನ್ಯಕ್ಕೆ ಒಳಪಟ್ಟಿರುವಳು. ನಮ್ಮ ಹುಡುಗರು ಅವಳನ್ನು ಅನಾವಶ್ಯಕವಾಗಿ ಉಪದ್ರವಿಸುತ್ತಾರೆ. ದೌರ್ಜನ್ಯಕ್ಕೆ ಗುರಿಪಡಿಸಲಾಗುವಾಗ ಅವಳು ಶಾಪ ಪ್ರಾರ್ಥನೆ ಮಾಡುತ್ತಾಳೆ. ಈ ಶಾಪ ಪ್ರಾರ್ಥನೆ ಸ್ವೀಕಾರ ಆಗಲೂ ಬಹುದು. ಆದ್ದರಿಂದ ನಾವು ನಮ್ಮ ಹುಡುಗರನ್ನು ಇದರಿಂದ ತಡೆಯಬೇಕು. ಹೀಗಾದರೆ ಅವಳಿಗೆ ತೊಂದರೆ ಕೊಡಲು ಅವರಿಗೆ ಸಾಧ್ಯವಾಗದು ಮತ್ತು ಅವಳು ಶಾಪ ಪ್ರಾರ್ಥನೆ ಕೂಡ ಮಾಡಲಿಕ್ಕಿಲ್ಲ. ಹೀಗೆ ಸಮಾಲೋಚನೆಯ ನಂತರ, ನಾಳೆಯಿಂದ ಎಲ್ಲರೂ ತಮ್ಮ ಮಕ್ಕಳನ್ನು ಮನೆಯಿಂದ ಹೊರಗೆ ಬಿಡಲಿಕ್ಕಿಲ್ಲವೆಂದು ತೀರ್ಮಾನಿಸಲಾಯಿತು. ಹೀಗೆ ಮರುದಿನ, ಇಂದಿನಿಂದ ಮನೆಯಿಂದ ಹೊರಗೆ ಹೋಗಬಾರದು ಎಂದು ಜನರು ಹುಡುಗರೊಡನೆ ಹೇಳಿದರು. ಹೆಚ್ಚಿನ ಮುಂಜಾಗ್ರತೆ ಎಂಬಂತೆ ಹೊರಗಿನ ಬಾಗಿಲುಗಳಿಗೆ ಸರಪಳಿ ಕಟ್ಟಿದರು. ಬೆಳಿಗ್ಗೆಯಾಗಿ ಆ ಮಹಿಳೆ

ಮೂಮೂಲಿನಂತೆ ತನ್ನ ಮನೆಯಿಂದ ಹೊರಗೆ ಬಂದಾಗ ಸ್ವಲ್ಪ ಸಮಯ ಅವಳು ಗಲ್ಲಿಗಳಲ್ಲಿ ಸುತ್ತಾಡುತ್ತಿದ್ದಳು. ಒಮ್ಮೆ ಒಂದು ಬೀದಿಯಿಂದ ಮತ್ತೊಮ್ಮೆ ಬೇರೊಂದು ಬೀದಿಯಿಂದ. ಆದರೆ ಯಾವನೇ ಹುಡುಗನನ್ನು ಅವಳು ರಸ್ತೆಯಲ್ಲಿ ಕಾಣಲಿಲ್ಲ. ಮೊದಲು ಸ್ಥಿತಿ ಏನಾಗಿತ್ತು ಎಂದರೆ, ಒಬ್ಬನು ಅವಳನ್ನು ಎಳೆಯುತ್ತಿದ್ದನು, ಮತ್ತೊಬ್ಬನ್ನು ಅವಳನ್ನು ನೂಕುತ್ತಿದ್ದನು, ಒಬ್ಬನು ಅವಳ ಕೈಯನ್ನು ಹಿಡಿಯುತ್ತಿದ್ದನು, ಮತ್ತೊಬ್ಬನು ಅವಳನ್ನು ಗೇಲಿ ಮಾಡುತ್ತಿದ್ದನು. ಆದರೆ ಇಂದು ಯಾವನೇ ಹುಡುಗ ಕಾಣಲು ಸಿಗುತ್ತಿಲ್ಲ. ಮಧ್ಯಾಹ್ನದ ತನಕ ಅವಳು ಕಾದಳು. ಆದರೆ ಯಾವನೇ ಹುಡುಗ ಮನೆಗಳಿಂದ ಹೊರಗೆ ಬರುತ್ತಿಲ್ಲವೆಂದು ಕಂಡಾಗ ಅವಳು ಅಂಗಡಿಗಳಿಗೆ ಹೋದಳು. ಪ್ರತಿಯೊಂದು ಅಂಗಡಿಗೆ ಹೋಗಿ ಹೀಗೆ ಹೇಳುತ್ತಿದ್ದಳು: ಇಂದು ನಿಮ್ಮ ಮನೆ ಬಿದ್ದುಹೋಯಿತೇ?, ಮಕ್ಕಳು ಸತ್ತುಹೋದರೇ? ಕೊನೆಗೆ ಆದದ್ದಾದರೂ ಏನು? ಹುಡುಗರು ಏಕೆ ಕಾಣುತ್ತಿಲ್ಲ. ಸ್ವಲ್ಪ ಸಮಯದ ನಂತರ ಈ ರೀತಿಯಾಗಿ ಅವಳು ಪ್ರತಿಯೊಂದು ಅಂಗಡಿಗೆ ಹೋಗಿ ಹೇಳಲು ಶುರುಮಾಡಿದಾಗ ಜನರು ಹೇಳಿದರು: ಬೈಗುಳ ಈ ರೀತಿಯಲ್ಲೂ ಸಿಗುತ್ತಿವೆ. ಶಾಪ ಪ್ರಾರ್ಥನೆಯನ್ನು ಅವಳು ಈಗಲೂ ನೀಡುತ್ತಿದ್ದಾಳೆ. ಮಕ್ಕಳು ತೊಂದರೆ ನೀಡುವಾಗಲೂ ಬೈಯ್ಯುತ್ತಾಳೆ. ಹೀಗಿರುವಾಗ ಮಕ್ಕಳನ್ನು ಮನೆಯಲ್ಲಿ ಇರಿಸುವ ಆವಶ್ಯಕತೆಯೇನದೆ? ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಮಸೀಹ್ ಮೌಊದ್(ಅ) ಈ ಕಥೆಯನ್ನು ವಿವರಿಸಿ ಹೀಗೆ ಹೇಳುತ್ತಿದ್ದರು: ಪ್ರವಾದಿಗಳ ಸ್ಥಿತಿಯೂ ಇದೇ ರೀತಿಯದ್ದಾಗಿದೆ. ಲೋಕವು ಅವರಿಗೆ ತೊಂದರೆ ನೀಡುತ್ತದೆ, ಕಷ್ಟತೆ ಕೊಡುತ್ತದೆ. ಅವರ ಮೇಲೆ ದೌರ್ಜನ್ಯ ಮಾಡುತ್ತಾರೆ. ಅವರಿಗೆ ಜೀವನ ಸಾಗಿಸಲು ಸಾಧ್ಯವಾಗದ ರೀತಿಯಲ್ಲಿ ಕಷ್ಟತೆ ನೀಡುತ್ತಾರೆ. ಜನರು ಹೀಗೆಲ್ಲ ಮಾಡಬಾರದು ಎಂದು ಒಂದು ವಿಭಾಗ ಜನರಿಗೆ ಅನಿಸುತ್ತದೆ. ಆದರೆ ಪ್ರವಾದಿಗಳು ಕೂಡ ಲೋಕವನ್ನು ಬಿಡುವುದಿಲ್ಲ. ಲೋಕವು ಅವರಿಗೆ ಕಷ್ಟತೆ ಕೊಡದಿದ್ದರೆ, ಪ್ರವಾದಿಗಳು ಸ್ವತಃ ಜನರನ್ನು ಅಲುಗಾಡಿಸುತ್ತಾರೆ, ಎಚ್ಚರಿಸುತ್ತಾರೆ. ಸಂದೇಶ ನೀಡುತ್ತಾರೆ, ಏನಾದರೂ ಸಂಗತಿಯನ್ನು ಹೇಳಿಕೊಡುತ್ತಾರೆ. ಜನರು ಅವರ ಕಡೆಗೆ ಗಮನ ನೀಡಲು ಮತ್ತು ಅವರ ಮಾತುಗಳನ್ನು ಕೇಳಲು ಹೆಚ್ಚಾಗಿ ತಬ್ಲೀಗ್ ಕಡೆಗೆ ಗಮನಹರಿಸುತ್ತಾರೆ.

ಪ್ರವಾದಿಗಳು ಏಕೆ ಕಠಿಣತೆ ತೋರಿಸುತ್ತಾರೆ ಎಂಬುದರ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಪ್ರವಾದಿಗಳು ಕಠಿಣವಾಗಿ ವರ್ತಿಸುವುದು ತಮಗೋಸ್ಕರವಾಗಿರುವುದಿಲ್ಲ. ಅಲ್ಲಾಹನ ಉನ್ನತ ಸ್ಥಾನವನ್ನು ಸ್ಥಾಪಿಸಲು ಅವರು ಕಠಿಣವಾಗಿಯೂ ಅಭಿಮಾನದಿಂದಲೂ ವರ್ತಿಸುತ್ತಾರೆ. ಅವರು ತಮ್ಮ ಸ್ವಂತಕ್ಕೆ ಸಂಬಂಧಿಸಿ ಸಂಪೂರ್ಣವಾಗಿ ವಿನಯಾನ್ವಿತರಾಗುತ್ತಾರೆ. ಒಮ್ಮೆ ಲಾಹೋರಿನ ಒಂದು ಗಲ್ಲಿಯಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಒಬ್ಬನು ಡಿಕ್ಕಿ ಹೊಡೆದಾಗ ಅವರು ಬಿದ್ದುಬಿಟ್ಟರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜೊತೆಗಿದ್ದ ವ್ಯಕ್ತಿ ಸಿಟ್ಟಿನಿಂದ ಡಿಕ್ಕಿ ಹೊಡೆದವನಿಗೆ ಹೊಡೆಯಲು ಸಿದ್ಧನಾದಾಗ ಅವರು ಹೇಳಿದರು: ಅವನು ತಾನು ಭಾವಿಸುತ್ತಿರುವ ಸತ್ಯಕ್ಕೋಸ್ಕರ ಸಿಟ್ಟಿನಿಂದ ಹಾಗೆ ಮಾಡಿದ್ದಾನೆ. ಮೌಲವಿಗಳ ಮಾತುಗಳನ್ನು ಕೇಳಿ ನಾನು ಸುಳ್ಳುವಾದಿಯೆಂದು ಅವನು ಭಾವಿಸಿದ್ದಾನೆ. ಆದ್ದರಿಂದ ಅದರ ಪ್ರತೀಕಾರ ಮಾಡಲು ಅವನು ಹಾಗೆ ಮಾಡಿದ್ದಾನೆ. ಹೀಗೆ ಅವನು ಸತ್ಯಕ್ಕಾಗಿ ಹಾಗೆ ಮಾಡಿದ್ದಾನೆ. ಆದ್ದರಿಂದ ಅವನೊಡನೆ ಏನೂ ಹೇಳಬೇಡ. ಆದ್ದರಿಂದ ಪ್ರವಾದಿಗಳು ಸ್ವಂತಕ್ಕಾಗಿ ಏನೂ ಹೇಳುವುದಿಲ್ಲ. ಬದಲಾಗಿ ಅಲ್ಲಾಹನ ಅಭಿಮಾನವನ್ನು ಸ್ಥಾಪಿಸಲು ಮಾತನಾಡುತ್ತಾರೆ.

ಆದ್ದರಿಂದ ಪ್ರವಾದಿಗಳು ಎಂದಾದರೂ ಕಠಿಣತೆ ತೋರಿಸಿದರೆ, ಪ್ರವಾದಿಗಳು ಕೂಡ ಕಠಿಣತೆ ತೋರಿಸುತ್ತಾರಲ್ಲವೇ ಎಂದು ಭಾವಿಸಬಾರದು. ಅದು ಅಲ್ಲಾಹನ ಪರವಾಗಿ ಆಗಿರುತ್ತದೆ. ಅವರಲ್ಲಿ ಮತ್ತು ಸಾಮಾನ್ಯ ಜನರಲ್ಲಿ ಬಹಳ ಅಂತರವಿದೆ. ಅವರು ಅಲ್ಲಾಹನಿಗಾಗಿ ಮಾಡುತ್ತಾರೆ. ಸಾಮಾನ್ಯ ಜನರು ಸ್ವಂತಕ್ಕಾಗಿ ಮಾಡುತ್ತಾರೆ. ಆದ್ದರಿಂದ ಸ್ವತಃ ತನ್ನನ್ನು ಸತ್ಯವಾಗಿಯೂ ದುರ್ಬಲನೆಂದು ಭಾವಿಸುವವನು ದಾರಿಗೆಟ್ಟು ಹೋಗಲಾರನು. ಅವನು ತನ್ನ ದೌರ್ಬಲ್ಯದ ಕಡೆಗೆ ಗಮನಹರಿಸಿ ಅಲ್ಲಾಹನೊಡನೆ ಸಹಾಯ ಬೇಡುವನು. ಮನುಷ್ಯನು ಯಾವಾಗ ದಾರಿಗೆಟ್ಟು ಹೋಗುತ್ತಾನೆ ಎಂದರೆ, ತಪ್ಪು ಮಾಡುತ್ತಿದ್ದರೂ ಸರಿ ಮಾಡುತ್ತಿದ್ದೇನೆ ಎಂದು ಭಾವಿಸುವಾಗ ಅವನಲ್ಲಿ ಅಹಂಕಾರ ಉಂಟಾಗುತ್ತದೆ. ಆಗ ಅವನು ದಾರಿಗೆಟ್ಟು ಹೋಗುತ್ತಾನೆ.

ಒಟ್ಟಿನಲ್ಲಿ, ಪ್ರವಾದಿಗಳ ಜೀವಿತವನ್ನು ನೋಡಿಕೊಂಡು ಸದಾ ವಿನಯತೆಯನ್ನು ತೋರಿಸಬೇಕಾಗಿದೆ. ಇದೇ ಪಾಪಗಳಿಂದ ರಕ್ಷಣೆ ಹೊಂದಲಿರುವ ಮಾರ್ಗವಾಗಿದೆ.

ಈ ಕುರಿತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರ ಒಂದು ಉಲ್ಲೇಖವಿದೆ. ಹಝ್ರತ್ ಮುಆವಿಯರ ನಮಾಝಿನ ಒಂದು ಘಟನೆಯನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅವರು ಒಮ್ಮೆ ಫಜ್ರ್ ನಮಾಝಿಗಾಗಿ ಸಮಯಕ್ಕೆ ಎಚ್ಚರಗೊಳ್ಳಲಿಲ್ಲ. ಆದರೆ ಈ ತಪ್ಪಿನ ಕಾರಣದಿಂದ ಅವರು ಅವನತಿ ಹೊಂದಲಿಲ್ಲ. ಬದಲಾಗಿ ಅಭಿವೃದ್ಧಿ ಹೊಂದಿದರು. ಶೈತಾನನಿಗೆ ಅವರನ್ನು ನಿಯಂತ್ರಿಸಲು ಸಾಧ್ಯವಾಗಲಿಲ್ಲ. ಅವರು ಅಲ್ಲಾಹನ ಸಾಮೀಪ್ಯ ಗಳಿಸಲು ಹೆಚ್ಚು ಶ್ರಮಿಸಿದರು. ಯಾರು ತನ್ನ ಪಾಪದ ಬಗ್ಗೆ ಜಾಗರೂಕನಾಗುತ್ತಾನೋ ಅವನು ಪಾಪದಿಂದ ರಕ್ಷಣೆ ಪಡೆಯುತ್ತಾನೆ. ತನ್ನ ಪಾಪದ ಬಗ್ಗೆ ಗಮನ ಹರಿಸದವನು ಪಾಪದಲ್ಲಿ ಮುಳುಗಿ ಹೋಗುತ್ತಾನೆ. ಆದ್ದರಿಂದ ಸತ್ಯವಿಶ್ವಾಸಿಯೂ ನೇರವಾದ ಮತ್ತು ಸತ್ಯವಾದ ಮಾರ್ಗದ ಕಡೆಗೆ ಗಮನಹರಿಸಬೇಕು. ಅಪಾಯದಿಂದ ಸುರಕ್ಷಿತನು ಎಂದು ಸ್ವತಃ ಭಾವಿಸಬಾರದು. ಅಲ್ಲಾಹನು ಹೇಳಿದಂತೆ ಮಾಡಿದರೆ ಮಾತ್ರ ಅವನು ಸುರಕ್ಷಿತನಾಗಬಹುದು. ಆದ್ದರಿಂದ ಮನುಷ್ಯನು ತನ್ನ ದೌರ್ಬಲ್ಯದ ಬಗ್ಗೆ ಗಮನಹರಿಸಬೇಕು. ತನ್ನ ಪರಿಶೋಧನೆ ನಡೆಸುವ ವ್ಯಕ್ತಿಗೆ ಆಧ್ಯಾತ್ಮಿಕತೆಯ ಬಾಗಿಲುಗಳು ತೆರೆಯಲ್ಪಡುತ್ತದೆ. ಯಾರು ಹಾಗೆ ಮಾಡುವುದಿಲ್ಲವೋ ಅವನಿಗೆ ಆಧ್ಯಾತ್ಮಿಕತೆಯ ಬಾಗಿಲುಗಳು ಮುಚ್ಚಲ್ಪಡುತ್ತವೆ. ಇಂತಹ ವ್ಯಕ್ತಿ ದಾರಿಗೆಟ್ಟು ಹೋಗುತ್ತಾನೆ.

(ಖುತ್ಬಾತೆ ಮಹ್ಮೂದ್, ಸಂಪುಟ-18, ಪುಟ-141-142)

ಮತ್ತೊಂದೆಡೆ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಯಾವನೇ ವ್ಯಕ್ತಿ ಪರಿಶ್ರಮವಿಲ್ಲದೇ ಗೌರವವನ್ನು ಗಳಿಸಲು ಸಾಧ್ಯವಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಈ ಕಾಲದಲ್ಲಿ ಅಲ್ಲಾಹನು ಎಲ್ಲ ಗೌರವಗಳನ್ನು ನಮ್ಮೊಂದಿಗೆ ಸಂಬಂಧಿಸಿ ಇರಿಸಿದ್ದಾನೆ. ಈಗ ಗೌರವ ಗಳಿಸುವವರು ನಮ್ಮ ಶಿಷ್ಯರು ಅಥವಾ ನಮ್ಮ ಶತ್ರುಗಳು ಆಗಿರುತ್ತಾರೆ. ಧಾರ್ಮಿಕವಾಗಿ ಗೌರವ ಗಳಿಸುವ ಜನರನ್ನು ನೋಡಿರಿ. ಒಂದೋ ಅವರು ಹಝ್ರತ್ ಮಸೀಹ್ ಮೌಊದ್(ಅ)ರನ್ನು ನಂಬುವವರಾಗಿರುತ್ತಾರೆ ಅಥವಾ ಕಠಿಣವಾಗಿ ವಿರೋಧಿಸುವವರಾಗಿರುತ್ತಾರೆ.

ಮೌಲವಿ ಸನಾವುಲ್ಲ ಸಾಹಿಬರನ್ನು ನೋಡಿರಿ. ಅವರು ದೊಡ್ಡ ಮೌಲವಿ ಏನೂ ಅಲ್ಲ. ಅವರ ಹಾಗಿರುವ ಸಾವಿರಾರು ಮೌಲವಿಗಳು ಪಂಜಾಬಿನಲ್ಲಿಯೂ ಪಂಜಾಬಿನ ಹೊರಗೆ ಹಿಂದುಸ್ಥಾನದಲ್ಲಿಯೂ ಇದ್ದರು. ಅವರಿಗೆ ಗೌರವ ಲಭಿಸಿದ್ದರೆ ಅದು ಲಭಿಸಿದ್ದು ನಮ್ಮನ್ನು ವಿರೋಧಿಸಿದ ಕಾರಣದಿಂದಾಗಿದೆ. ಈ ಸಂಗತಿಯನ್ನು ಅವರು ಒಪ್ಪಿದರೂ ಇಲ್ಲದಿದ್ದರೂ ಸತ್ಯ ಇದೇ ಆಗಿದೆ. ನಮ್ಮನ್ನು ವಿರೋಧಿಸುವುದರಿಂದ ಅಥವಾ ನಮಗೆ ನೆರವಾಗುವುದರಿಂದ ಗೌರವ ಲಭಿಸುವುದು. ಕೇಂದ್ರಬಿಂಧು ನಾವೇ ಆಗಿದ್ದೇವೆ. ನಮ್ಮ ಕಾರಣದಿಂದಲೇ ನಮ್ಮ ವಿರೋಧಿಗಳಿಗೆ ಗೌರವ ಲಭಿಸುತ್ತದೆ. (ತಫ್ಸೀರೆ ಕಬೀರ್, ಸಂಪುಟ-8, ಪುಟ-614)

ಇದನ್ನೇ ನಾವು ಈಗಲೂ ನೋಡುತ್ತೇವೆ. ಮೌಲವಿಗಳಿಗೆ ಊಟ ಸಿಗುತ್ತಿರುವುದು ಅಥವಾ ಸ್ಥಾನಮಾನ ಲಭಿಸುತ್ತಿರುವುದು ಅಹ್ಮದಿಯ್ಯತ್ತನ್ನು ವಿರೋಧಿಸುವ ಕಾರಣದಿಂದಾಗಿದೆ. ಈಗಂತು ಕೆಲವು ದೇಶಗಳಲ್ಲಿ ರಾಜಕೀಯ ನೇತಾರರು ವಿಶೇಷವಾಗಿ ಪಾಕಿಸ್ತಾನದಲ್ಲಿ ಅಹ್ಮದಿಯ್ಯತ್ತನ್ನು ವಿರೋಧಿಸುವ ಮೂಲಕ ತಮ್ಮ ರಾಜಕೀಯತೆಯನ್ನು ಹೊಳಪಿಸಲು ಪ್ರಯತ್ನಿಸುತ್ತಾರೆ. ಹೀಗೆ ತಮ್ಮ ಕುರ್ಚಿಯನ್ನು ಕಾಪಾಡುತ್ತಾರೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಿರುದ್ಧ ಪಿತೂರಿಗಳನ್ನು ನಡೆಸಲಾಗಿತ್ತು. ಹತ್ಯೆಗೆ ಪ್ರಯತ್ನಿಸಿದರೆಂಬ ಅಪರಾಧ ಹೊರಿಸಿ ಮೊಕದ್ದಮೆ ದಾಖಲಿಸಲಾಯಿತು. ಆದರೆ ಸದಾ ಎದುರಾಳಿಗಳನ್ನು ಅಲ್ಲಾಹನು ಪರಾಜಿತಗೊಳಿಸುತ್ತಿದ್ದನು. ಇಂತಹದ್ದೇ ಒಂದು ಮೊಕದ್ದಮೆಯಲ್ಲಿ ಸಾಕ್ಷಿ ಹೇಳಲು ನ್ಯಾಯಾಲಯದಲ್ಲಿ ಮೌಲವಿ ಮುಹಮ್ಮದ್ ಹುಸೈನ್ ಬಟಾಲವಿ ಆಗಮಿಸಿದ್ದರು. ಮಿರ್ಝಾ ಸಾಹಿಬ್‌ರಿಗೆ ಕೈಕೋಳ ಹಾಕದಿದ್ದರು ಕೂಡ ಅವರು ನ್ಯಾಯಾಲಯದಲ್ಲಿ ನಿಂದಿತರಾಗಿ ನಿಲ್ಲುವರು ಎಂಬ ಆಶೆಯಿಂದ ಅವರು ಬಂದಿದ್ದರು. ಆದರೆ ಯಾರ ಮುಂದೆ ಮೊಕದ್ದಮೆ ಇರಿಸಲಾಗಿತ್ತೋ ಆ ಡೆಪ್ಯೂಟಿಯು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಿರೋಧಿಯಾಗಿದ್ದರು ಕೂಡ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನೋಡಿದಾಗ ಅವರ ಹಗೆ ದೂರವಾಯಿತು ಮತ್ತು ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಕುಳಿತುಕೊಳ್ಳಲು ಕುರ್ಚಿಯನ್ನು ಕೊಟ್ಟರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅದರಲ್ಲಿ ಕುಳಿತುಕೊಂಡರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಿಂದ್ಯರಾಗುವುದನ್ನು ನೋಡುವುದಕ್ಕಾಗಿಯೇ ಬಂದಿದ್ದ ಮೌಲವಿ ಮುಹಮ್ಮದ್ ಹುಸೈನ್ ಬಟಾಲವಿಯು ಇದನ್ನು ನೋಡಿದಾಗ ಅವರಿಗೆ ಸಹಿಸಲು ಸಾಧ್ಯವಾಗಲಿಲ್ಲ. ನನಗೂ ಕುರ್ಚಿ ಕೊಡಿರಿ ಎಂದು ಡೆಪ್ಯೂಟಿ ಕಮೀಶನರ್ ಡಗ್ಲಸ್‌ನೊಡನೆ ಕೇಳಿದನು. ಅಪರಾಧಿಗೆ ಕುರ್ಚಿ ಲಭಿಸಿರುವಾಗ ಸಾಕ್ಷಿಗೆ ಏಕೆ ಕುರ್ಚಿಯಿಲ್ಲವೆಂದು ಬಟಾಲವಿ ಭಾವಿಸಿದ್ದನು. ಆದರೆ ಇದನ್ನು ಕೇಳಿದಾಗ

ಕ್ಯಾಪ್ಟನ್ ಡಗ್ಲಸಿಗೆ ಕೋಪಬಂತು. ನಿನಗೆ ಕುರ್ಚಿ ಇಲ್ಲವೆಂದು ಅವರು ಕೋಪದಿಂದ ಹೇಳಿದರು. ಮೌಲವಿ ಮುಹಮ್ಮದ್ ಹುಸೈನ್ ಸಾಹಿಬ್ ಹೇಳಿದರು: ನನ್ನ ತಂದೆಗೆ ಲಾರ್ಡಿನ ದರ್ಬಾರಿನಲ್ಲಿ ಕುರ್ಚಿ ಲಭಿಸುತ್ತಿತ್ತು. ನನಗೂ ಕುರ್ಚಿ ಕೊಡಿರಿ. ನಾನು ಅಹ್ಲೇ ಹದೀಸಿನ ಪ್ರಚಾರಕನಾಗಿರುವೆನು. ನನಗೆ ಕುರ್ಚಿ ಸಿಗಬೇಕು. ಆಗ ಕ್ಯಾಪ್ಟನ್ ಡಗ್ಲಸ್ ಹೇಳಿದನು: ವ್ಯರ್ಥವಾದ ಮಾತುಗಳನ್ನು ಹೇಳಬೇಡ. ಹಿಂದಕ್ಕೆ ಸರಿದು ನೇರವಾಗಿ ನಿಲ್ಲು. ಹೀಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಿಂದಿತನಾಗಿ ಕಾಣುವುದಕ್ಕೆ ಬದಲಾಗಿ, ಅಲ್ಲಾಹನು ಅವನನ್ನು ನಿಂದಿತಗೊಳಿಸಿದನು. ಆದ್ದರಿಂದ ನೆನಪಿಡಬೇಕು. ಅಲ್ಲಾಹನ ಕಡೆಯಿಂದ ಸಹಾಯ ಬರುವಾಗ ಯಾವನೇ ವ್ಯಕ್ತಿಗೆ ಅದನ್ನು ತಡೆಯಲು ಸಾಧ್ಯವಿಲ್ಲ.

ಪೊಲೀಸ್ ಆಫೀಸರ್, ಸಿಪಾಯಿ ಅಥವಾ ದೊಡ್ಡ ವ್ಯಕ್ತಿಯ ಜೀವನದ ಬಗ್ಗೆ ಯಾವುದೇ ಭರವಸೆ ಇಲ್ಲ. ಒಂದೇ ಕ್ಷಣದಲ್ಲಿ ಅಲ್ಲಾಹನು ಶತ್ರುಗಳನ್ನು ನಾಶಪಡಿಸಬಲ್ಲನು. ಒಟ್ಟಿನಲ್ಲಿ ಅಲ್ಲಾಹನ ಮುಂದೆ ಬಾಗಿರಿ ಮತ್ತು ಅವನೊಡನೆ ದುಆ ಮಾಡಿರಿ. ಸತ್ಯವಿಶ್ವಾಸಿಗಳಿಗೆ ಪರೀಕ್ಷೆಗಳು ಇರಬೇಕಾದದ್ದು ವಿಧಿಯಾಗಿದೆ. ಆದ್ದರಿಂದ ಸಹನೆದೋರಿದರೆ ಮತ್ತು ದುಆಗಳನ್ನು ಮಾಡಿದರೆ ಅಲ್ಲಾಹನು ಆ ವಿಪತ್ತುಗಳನ್ನು ದೂರ ಮಾಡುವನು. (ಖುತ್ಬಾತೆ ಮಹ್ಮೂದ್, ಸಂಪುಟ-15, ಪುಟ-184-186)

ಹಝ್ರತ್ ಮಸೀಹ್ ಮೌಊದ್(ಅ) ಮತ್ತು ಕ್ರೈಸ್ತರ ನಡುವೆ ಒಂದು ಸಂವಾದ ನಡೆದಿತ್ತು. ಅದರ ಬಗ್ಗೆ ಹಝ್ರತ್ ಮಸೀಹ್ ಮೌಊದ್(ಅ)ರ ಗ್ರಂಥವಾದ ಜಂಗೇ ಮುಖದ್ದಸ್‌ನಲ್ಲಿ ಇದೆ. ಈ ಸಂವಾದದ ಬಗ್ಗೆ ಪ್ರಸ್ತಾಪಿಸುತ್ತಾ ತನ್ನ ಒಂದು ಖುತ್ಬದಲ್ಲಿ ಹಝ್ರತ್ ಮುಸ್ಲಿಹ್ ಮೌಊದ್(ರ) ಒಂದೆಡೆ ಹೇಳುತ್ತಾರೆ: ಆಥಮಿನೊಂದಿಗೆ ಇರುವ ಸಂವಾದವನ್ನು ನಾವು ಕಂಡಾಗ ಮೊದಲು ನಾವು ಅಚ್ಚರಿಗೊಂಡೆವು. ಅನಂತರ ನಮ್ಮ ವಿಶ್ವಾಸ ಆಕಾಶದ ತನಕ ತಲುಪುವಷ್ಟು ಉನ್ನತಗೊಂಡಿತು ಎಂದು ಖಲೀಫ ಅವ್ವಲ್ ಹೇಳಿದ್ದರು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಕ್ರೈಸ್ತರ ವಿರುದ್ಧ ನಡೆಸಿದ ಸಂವಾದ **ಜಂಗೇ ಮುಖದ್ದಸ್** ಎಂಬ ಹೆಸರಲ್ಲಿ ಪ್ರಸಿದ್ಧವಾಗಿದೆ. ಆ ಸಂದರ್ಭದಲ್ಲಿ ಕ್ರೈಸ್ತರು ಅಂಗವಿಕಲರನ್ನೂ ಅಂಧರನ್ನೂ ಮೂಗರನ್ನೂ ಅಚಾನಕವಾಗಿ ತಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಹೇಳಿದರು: ಹಝ್ರತ್ ಈಸಾ ಮಸೀಹ್ ಇಂತಹ ಜನರಿಗೆ ಉಪಶಮನ ನೀಡುತ್ತಿದ್ದರು. ನೀವು ಅವರಿಗೆ ಸದೃಶರಾಗಿ ಆಗಮಿಸಿರುವುದಾಗಿ ವಾದಿಸುತ್ತಿರುವಿರಿ. ಆದುದರಿಂದ ನೀವು ಇವರನ್ನೆಲ್ಲ ಸರಿಪಡಿಸಿರಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಗಾಬರಿಗೊಳ್ಳದೆ ನಿರಾತಂಕವಾಗಿ ಹೇಳಿದರು: ಇಸ್ಲಾಮ್ ಧರ್ಮದ ಉಪದೇಶವೇನೆಂದರೆ ಹಝ್ರತ್ ಈಸಾ ಮಸೀಹ್ ಸರಿಪಡಿಸಿದ್ದು ಇಂತಹ ಅಂಧರನ್ನೂ ಮೂಗರನ್ನೂ ಅಲ್ಲ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತೋರಿಸಿದ ಅದ್ಭುತ ಕೃತ್ಯಗಳನ್ನು ನಾನು ಮಾಡಿ ತೋರಿಸಬಲ್ಲೆನು. ಆದರೆ, ನೀವು ಆವಶ್ಯಪಡುವ ಅದ್ಭುತ ಕೃತ್ಯಗಳ ಬಗ್ಗೆ ಹೇಳುವುದಾದರೆ, ನಿಮ್ಮ ಗ್ರಂಥಗಳಲ್ಲಿ ಹೀಗೆ ಬರೆದಿದೆ. ಸಾಸಿವೆ ಕಾಳಿನಷ್ಟು ವಿಶ್ವಾಸವಿರುವ ಕ್ರೈಸ್ತನು ಕೂಡ ಹಝ್ರತ್ ಈಸಾ ಮಸೀಹ್ ತೋರಿಸಿದ ಅದ್ಭುತ ಕೃತ್ಯಗಳನ್ನು ಮಾಡಬಲ್ಲ ಎಂದು. ಈಗ ಅಂಗವಿಕಲರು, ಅಂಧರು, ಮೂಗರು ಎಲ್ಲ ಇಲ್ಲಿ ಇದ್ದಾರೆ. ನಿಮ್ಮಲ್ಲಿ ಒಂದು ಸಾಸಿವೆ ಕಾಳಿನಷ್ಟು ವಿಶ್ವಾಸವಾದರೂ ಇದ್ದರೆ ನೀವು ಈ ಜನರನ್ನು ಸರಿಪಡಿಸಿರಿ. ಅಲ್ಲಾಹನು ತನ್ನ ಸಾಮೀಪ್ಯ ಗಳಿಸಿದವರಿಗೆ ಪ್ರತಿ ಸಂದರ್ಭದಲ್ಲಿ ಗೌರವ ನೀಡುತ್ತಾನೆ ಮತ್ತು ಅವರಿಗೆ ಎಂತಹ ಉತ್ತರ ನೀಡುವ ಸಾಮರ್ಥ್ಯ ನೀಡುತ್ತಾನೆಂದರೆ ಅದರ ಪರಿಣಾಮವಾಗಿ ಶತ್ರುಗಳು ತಬ್ಬಿಬ್ಬಾಗುತ್ತಾರೆ.

(ಖುತ್ಬಾತೆ ಮಹ್ಮೂದ್, ಸಂಪುಟ-23, ಪುಟ-88-89)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ವಿರೋಧದ ಒಂದು ಘಟನೆ ಸಿಯಾಲ್ಕೋಟ್‌ನಲ್ಲಿ ನಡೆಯಿತು ಅದರ ಬಗ್ಗೆ ಅವರು(ಅ) ವಿವರಿಸಿದ್ದಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಸಿಯಾಲ್ಕೋಟ್‌ಗೆ ಹೋದಾಗ, ಮೌಲ್ವಿಗಳು ಅವರ ಉಪನ್ಯಾಸಕ್ಕೆ ಹೋದವರ ನಿಕಾಹ್ ರದ್ದುಗೊಳಿಸುವುದಾಗಿ ಫತ್ವಾ ಹೊರಡಿಸಿದರು. ಆದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ವ್ಯಕ್ತಿತ್ವ ಹೇಗಿತ್ತು ಎಂದರೆ ಜನರು ಆ ಫತ್ವವನ್ನು ಸಹ ಪರಿಗಣಿಸದೆ ಆ ಲೆಕ್ಚರ್ (ಉಪನ್ಯಾಸವನ್ನು) ಆಲಿಸಲು ಹೋದಾಗ ಮೌಲ್ವಿಗಳು ಜನರನ್ನು ತಡೆಯಲು ರಸ್ತೆಗಳಲ್ಲಿ ಕಾವಲುಗಾರರನ್ನು ಸ್ಥಾಪಿಸಿದರು. ಯಾರು ನಿಲ್ಲುವುದಿಲ್ಲವೊ ಅವರನ್ನು ಹೊಡೆಯಲು ರಸ್ತೆಗಳಲ್ಲಿ ಕಲ್ಲುಗಳನ್ನು ಸಂಗ್ರಹಿಸಿದ್ದರು. ಅದೇ ರೀತಿ ಜಲ್ಸಾಗಾಹ್‌ದಿಂದ ಜನರನ್ನು ಉಪನ್ಯಾಸವನ್ನು ಆಲಿಸಬಾರದು ಎಂದು ಕರೆದುಕೊಂಡು ಹೋಗುತ್ತಿದ್ದರು. ಆಗ ಸಿಯಾಲ್‌ಕೋಟ್‌ನಲ್ಲಿ ಸಿಟಿ ಇನ್ಸ್‌ಪೆಕ್ಟರ್ ಆಗಿದ್ದ ಬಿ.ಟಿ.ಸಾಹಿಬ್ ಒಬ್ಬರು ಪೊಲೀಸ್ ಅಧೀಕ್ಷಕರಾಗಿದ್ದರು ಎಂದು ಹೇಳಲಾಗುತ್ತದೆ. ಈಗ ಅವರು ಯಾವ ಹುದ್ದೆಯಲ್ಲಿದ್ದಾರೆ ಎಂದು ಗೊತ್ತಿಲ್ಲ. ಆದರೆ ಈ ಜಲ್ಸದ ವ್ಯವಸ್ಥೆ ಈ ಬಿ.ಟಿ.ಸಾಹೇಬರ ಜವಾಬ್ದಾರಿಯಾಗಿತ್ತು. ಜನ ಗಲಾಟೆ ಮಾಡಿ ಕಿಡಿಗೇಡಿತನ ಮಾಡಬೇಕೆಂದಾಗ ಹಝ್ರತ್ ಸಾಹೇಬರ ಭಾಷಣವನ್ನೂ ಆ ಇನ್ಸಪೆಕ್ಟರ್ ಸಹ ಕೇಳಿದ್ದರಿಂದ ಈ ಭಾಷಣದಲ್ಲಿ ಆರ್ಯರು, ಕ್ರೈಸ್ತರ ಮೇಲೆ ಹಲ್ಲೆ ನಡೆಲಾಗಿದ್ದು, ಮಿರ್ಝಾ ಸಾಹೇಬರು ಹೇಳಿದ್ದೇನೆಂದು ಅಚ್ಚರಿಯಾಯಿತು. ಒಂದು ವೇಳೆ ಮಿರ್ಝಾ ಸಾಹೇಬರ ಉಪನ್ಯಾಸವು ಆ ಮೌಲವಿಗಳ ಯೋಚನೆಗಳ ವಿರುದ್ಧವಾಗಿದ್ದರು ಇದರಿಂದ ಇಸ್ಲಾಮಿನ ಧರ್ಮಕ್ಕೆ ಯಾವುದೇ ಆಕ್ಷೇಪಣೆಯನ್ನು ವ್ಯಕ್ತವಾಗುವುದಿಲ್ಲ. ಇದು ಕ್ರಿಶ್ಚಿಯನ್ನರ ವಿರುದ್ಧ ಉಪ್ನ್ಯಾಸವಾಗಿತ್ತು. ಮತ್ತು ಮಿರ್ಝಾ ಸಾಹಿಬ್ ಹೇಳುವುದು ನಿಜವಾಗಿದ್ದರೆ ಇಸ್ಲಾಂ ಧರ್ಮವು ನಿಜವೆಂದು ಸಾಬೀತುಪಡಿಸುತ್ತದೆ. ಈ ವಿಷಯಗಳು ನಿಜವಾಗಿದ್ದರೆ ಇಸ್ಲಾಂ ಧರ್ಮವು ಸತ್ಯವಾಗಿದೆ. ಹಾಗಾದರೆ ಮುಸಲ್ಮಾನರ ಗಲಭೆಗೆ ಕಾರಣವೇನು? ಸರ್ಕಾರಿ ಅಧಿಕಾರಿಯಾಗಿದ್ದರೂ ಆತನು ಆ ಸಭೆಯಲ್ಲಿ ನಿಂತು ಹೇಳಿದನು ಕ್ರೈಸ್ತರ ದೇವರು ಸತ್ತಿದ್ದಾನೆ ಎನ್ನಲಾಗಿದೆ. ಅಲ್ಲಿದ್ದ ಮುಸಲ್ಮಾನರನ್ನು ಉದ್ದೇಶಿಸಿ ಹೇಳಿದನು, "ನೀವೆಲ್ಲರು ಯಾಕೆ ಕೋಪಗೊಂಡಿದ್ದೀರ? ಅವರು ಕ್ರಿಶ್ಚಿಯನ್ನರ ದೇವರು ಸತ್ತಿದ್ದಾನೆ ಎಂದು ಹೇಳುತ್ತಿರುವುದು, ಇದಕ್ಕೆ ನೀವೇಕೆ ಕೋಪಗೊಳ್ಳುತ್ತಿದ್ದೀರಿ? ಈ ವಿಷಯವು ನಿಮಗೆ ಒಳ್ಳೆಯದ್ದಾಗಿದೆ.

ಹೀಗೆ ಅವರ ವರ್ತನೆಯು ನಮ್ಮೊಂದಿಗೆ ಇದೆ ಅಂದರೆ ನಮ್ಮನ್ನು ವಿರೋಧಿಸುವವರು ಹೀಗೆ ನಡೆಸಿಕೊಳ್ಳುತ್ತಾರೆ ಮತ್ತು ಹಿನ್ನೋಟದಲ್ಲಿ ಅವರಲ್ಲಿ ಅಂದರೆ ಒಬ್ಬ ಮುಸಲ್ಮಾನನು ಆರ್ಯರ ಬಳಿಗೆ ಹೋದರೆ ಮುಸಲ್ಮಾನರು ತಲೆಕೆಡಿಸಿಕೊಳ್ಳುವುದಿಲ್ಲ. ಆದರೆ ಮಿರ್ಝಾ ಸಾಹೇಬರು ಮಾತುಗಳನ್ನು ಯಾರು ಕೇಳಬಾರದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಬಗ್ಗೆ ಈ ಕಲ್ಪನೆಯು ತಪ್ಪು ಎಂದು ಹೇಳುತ್ತಾರೆ. ಮುಸ್ಲಿಮರಲ್ಲಿ ಯಾರಾದರೂ ತಮ್ಮ ಧರ್ಮವನ್ನು ಬದಲಾಯಿಸಿದರೆ ಅದು ವ್ಯತ್ಯಾಸವನ್ನು ಉಂಟುಮಾಡುತ್ತದೆ.

ನಂತರ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಿದ್ದರು:

ಅಯ್ ದಿಲ್ ತು ನೀಝ್ ಖಾತಿರ್ ಈಂ ನಾ ನಿಗಾಹ್‌ದಾರ್
ಕಾಆಖಿರ್ ಕುನನ್ದ್ ದಅವ ಎ ಹುಬ್ಬಿ ಪಯಮ್ಬರಮ್

(ತಾರೀಖ್ ಶಿಧಿ ಮಲ್ಕಾನಾ, ಅನ್ವರ್-ಉಲ್-ಉಲೂಮ್, ಸಂಪುಟ-7, ಪುಟ-192)

ಓ ಹೃದಯ! ಈ ಜನರನ್ನು ನೋಡಿಕೊಳ್ಳಿ ಏಕೆಂದರೆ ಇವರೆಲ್ಲರು ನನ್ನ ಪ್ರವಾದಿ(ಸ) ರವರನ್ನು ಪ್ರೀತಿಸುತ್ತಾರೆ ಎಂದು ಹೇಳಿಕೊಳ್ಳುತ್ತಾರೆ. ಆದ್ದರಿಂದ, ಯಾವುದೇ ಸಂದರ್ಭದಲ್ಲಿ, ಅವರ ಧರ್ಮವನ್ನು ಬದಲಾಯಿಸುವ ಅಥವಾ ಧರ್ಮವನ್ನು ಬದಲಾಯಿಸುವ ಅಥವಾ ಕೆಡಿಸುವ ನೋವು ನಮಗೆ ಇರುತ್ತದೆ.

ಒಬ್ಬ ವ್ಯಕ್ತಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬಳಿಗೆ ಬಂದನು. ತಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬಹಳ ಪ್ರಶಂಸಿಸುವ ವ್ಯಕ್ತಿಯಾಗಿರುವನು ಎಂದು ಹೇಳಿದನು ಮತ್ತು ಮೌಲವಿಗಳು ನಂಬಿಕೆ ಹೊಂದುವಂತೆ ಮಾಡಲು ವಿವಿಧ ಸಲಹೆಗಳನ್ನು ನೀಡಲು ತೊಡಗಿದನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವನ ಮಾತುಗಳನ್ನು ಆಲಿಸಿದ ನಂತರ ಹೇಳಿದರು: ನನ್ನ ವಾದಗಳು ಮಾನವ ನಿರ್ಮಿತವಾಗಿರುತ್ತಿದ್ದರೆ ನಿಸ್ಸಂಶಯವಾಗಿ ನೀನು ಹೇಳಿದಂತೆ ನಾನು ಮಾಡುತ್ತಿದ್ದೆ. ಆದರೆ ನನ್ನ ವಾದಗಳು ಅಲ್ಲಾಹನ ಆಜ್ಞೆಗಳ ಪ್ರಕಾರವಾಗಿವೆ. ಅಲ್ಲಾಹನು ನನಗೆ ಮನವರಿಕೆ ಮಾಡಿಕೊಟ್ಟ ಹಾಗೆಯೇ ನಾನು ಮಾಡಿದೆ. ಮೋಸ ಮತ್ತು ವಂಚನೆಯನ್ನು ಮನುಷ್ಯನ ಮೋಸದ ವಿರುದ್ಧವಾಗಿ ಮಾಡಲಾಗುತ್ತದೆ. ಅಲ್ಲಾಹನ ಜಮಾಅತ್ ಇವುಗಳಿಂದ ಖಂಡಿತ ಹೆದರುವುದಿಲ್ಲ. ಇದು ಅಲ್ಲಾಹನ ಕೆಲಸವಾಗಿದೆ. ಅವನೇ ಈ ಸಂದೇಶವನ್ನು ತಲುಪಿಸುವನು.

ಸೂರ್ಯ ಚಂದ್ರಗ್ರಹಣದ ಘಟನೆಯು ನಮ್ಮ ಜಮಾಅತಿನ ಪ್ರಸಿದ್ಧ ಘಟನೆಯಾಗಿದೆ. ಈ ಕುರಿತು ಬಹುಶಃ ಗುಜರಾತಿನ ನಿವಾಸಿಯಾದ ಒಬ್ಬ ಮೌಲವಿ ಯಾವಾಗಲೂ ಹೀಗೆ ಹೇಳುತ್ತಿದ್ದರು: ಮಿರ್ಝಾ ಸಾಹಿಬ್‌ರ ವಾದದಿಂದ ಯಾರೂ ಮೋಸಕ್ಕೆ ಒಳಗಾಗಬೇಡಿರಿ. ಮಹ್‌ದಿಯ ಕಾಲಘಟ್ಟದಲ್ಲಿ ಸೂರ್ಯಚಂದ್ರನಿಗೆ ರಮಝಾನ್ ತಿಂಗಳಲ್ಲಿ ಗ್ರಹಣವಾಗುವುದು ಎಂದು ಹದೀಸುಗಳಲ್ಲಿ ಸ್ಪಷ್ಟವಾಗಿ ಬರೆಯಲಾಗಿದೆ. ಈ ಭವಿಷ್ಯವಾಣಿ ಈಡೇರುವ ತನಕ ಅವರ ವಾದವನ್ನು ಸತ್ಯವೆಂದು ತಿಳಿಯಬೇಡಿರಿ. ಆ ಮೌಲವಿ ಜೀವಂತವಾಗಿ ಇದ್ದ ಕಾಲದಲ್ಲೇ ಸೂರ್ಯ ಚಂದ್ರ ಗ್ರಹಣದ ಭವಿಷ್ಯವಾಣಿ ಈಡೇರಿತು. ಅದನ್ನು ಆ ಮೌಲವಿಯ ನೆರೆಕರೆಯವನಾದ ಒಬ್ಬ ಅಹ್ಮದಿಯು ಮೌಲವಿಗೆ ತಿಳಿಸಿಕೊಟ್ಟರು. ಆ

ಮೌಲವಿ ಗಾಬರಿಯಿಂದ ತನ್ನ ಮನೆಯ ಮಾಳಿಗೆಗೆ ಹತ್ತಿ ಅತ್ತಿತ್ತ ನಡೆಯಲು ಶುರುಮಾಡಿದನು ಮತ್ತು ಹೀಗೆ ಹೇಳುತ್ತಿದ್ದನು: ಈಗ ಜನರು ದಾರಿಗೆಟ್ಟು ಹೋಗುವವರು, ಈಗ ಜನರು ದಾರಿಗೆಟ್ಟು ಹೋಗುವವರು. ಈ ಭವಿಷ್ಯವಾಣಿ ಈಡೇರಿರುವಾಗ ಈಗ ಜನರು ಹಝ್ರ್ರತ್ ಮಿರ್ಝಾ ಸಾಹಿಬ್‌ರನ್ನು ನಂಬಿ ಸನ್ಮಾರ್ಗ ಪಡೆಯುವವರು, ದಾರಿತಪ್ಪಿ ಹೋಗಲಾರರು ಎಂದು ಅವನು ಭಾವಿಸಲಿಲ್ಲ. ಕ್ರೈಸ್ತರು ಕೂಡ ಒಂದು ರೀತಿಯಲ್ಲಿ ಹೀಗೆಯೇ ಹೇಳುತ್ತಾರೆ: ಹಿಂದಿನ ಗ್ರಂಥಗಳಲ್ಲಿ ಹೇಳಲಾದ ಎಲ್ಲ ಲಕ್ಷಣಗಳು ಈಡೇರಿವೆ, ಆದರೆ ಮತ್ತೊಂದೆಡೆ ಹಝ್ರ್ರತ್ ಪೈಗಂಬರ್(ಸ)ರ ವಾದವನ್ನು ಕೇಳಿ ಹೇಳುತ್ತಾರೆ: ಅದೇ ಸಮಯದಲ್ಲಿ ಆಕಸ್ಮಿಕವಾಗಿ ಒಬ್ಬ ಸುಳ್ಳುವಾದಿ ವಾದಿಸಿದರು ಎಂದೂ ಹೇಳುತ್ತಾರೆ. ಮುಸ್ಲಿಮರು ಕೂಡ ಮಿರ್ಝಾ ಸಾಹಿಬ್‌ರ ಕುರಿತು ಹೀಗೆಯೇ ಹೇಳುತ್ತಾರೆ: ಎಲ್ಲ ಲಕ್ಷಣಗಳು ಈಡೇರಿವೆ. ಆದರೆ ಕಾಕತಾಳಿಯುವೆಂಬಂತೆ ಒಬ್ಬ ಸುಳ್ಳುವಾದಿ ವಾದಿಸಿದನು. ಇದಾಗಿದೆ ಮುಸ್ಲಿಮರ ಸ್ಥಿತಿ. (ತಫ್ಸೀರೆ ಕಬೀರ್, ಸಂಪುಟ–10, ಪುಟ–56)

ಹಝ್ರ್ರತ್ ಮಸೀಹ್ ಮೌಊದ್(ಅ)ರ ಗತಕಾಲದ ಬಗ್ಗೆ ಹೇಳುತ್ತಾ ಹಝ್ರ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಪ್ರತಿಯೊಂದು ಕೆಡುಕು ಮೆಲ್ಲಮೆಲ್ಲನೆ ಉಂಟಾಗುತ್ತದೆ. ಒಬ್ಬ ಸತ್ಯವಾದಿ ವ್ಯಕ್ತಿ ರಾತ್ರಿ ನಿದ್ದೆ ಹೋಗಿ ಬೆಳಿಗ್ಗೆ ಆಗುವಾಗ ಅತ್ಯಂತ ದೊಡ್ಡ ಸುಳ್ಳನ್ನು ಹೇಳಲು ಸಾಧ್ಯವಿಲ್ಲ. ಹಿಂದೆ ಮನುಷ್ಯನ ವಿಷಯದಲ್ಲೂ ಸುಳ್ಳು ಹೇಳದ ವ್ಯಕ್ತಿ ಅಚಾನಕ್ಕಾಗಿ ಬೆಳಗ್ಗೆಯಾಗುವಾಗ ಅಲ್ಲಾಹನ ಮೇಲೆ ಸುಳ್ಳು ಹೇಳಲು ಸಾಧ್ಯವಿಲ್ಲ. ಅದರ ಪ್ರಕಾರ ನಾವು ಹಝ್ರ್ರತ್ ಮಿರ್ಝಾ ಸಾಹಿಬ್‌ರ ವಾದಕ್ಕಿಂತ ಮುಂದಿನ ಜೀವಿತವನ್ನು ನೋಡುವಾ. ಅವರು ಖಾದಿಯಾನಿನ ಹಿಂದು, ಸಿಖ್ಖ್ ಮತ್ತು ಮುಸ್ಲಿಮರೊಡನೆ ಪದೇ ಪದೇ ಹೀಗೆ ಹೇಳಿದರು: ನೀವು ನನ್ನ ಹಿಂದಿನ ಜೀವಿತದ ಬಗ್ಗೆ ಆಕ್ಷೇಪ ಎತ್ತಬಲ್ಲಿರಾ? ಆದರೆ ಯಾರಿಗೂ ಅದರ ಧೈರ್ಯ ಬರಲಿಲ್ಲ. ಬದಲಾಗಿ ಅವರ ಪರಿಶುದ್ಧತೆಯನ್ನು ಒಪ್ಪಬೇಕಾಗಿ ಬಂದಿತ್ತು. ಮೌಲವಿ ಮುಹಮ್ಮದ್ ಹುಸೈನ್ ಬಟಾಲವಿ ನಂತರ ಅತ್ಯಂತ ಕಠಿಣ ವಿರೋಧಿಯಾಗಿದ್ದರು. ಅವರು ತನ್ನ ಪತ್ರಿಕೆಯಲ್ಲಿ ಹಝ್ರ್ರತ್ ಮಸೀಹ್ ಮೌಊದ್(ರ)ರ ಪರಿಶುದ್ಧತೆ ಮತ್ತು ಅದು ನ್ಯೂನತೆರಹಿತವಾಗಿರುವುದಕ್ಕೆ ಸಾಕ್ಷಿ ಹೇಳಿದ್ದರು. ಅದೇ ರೀತಿಯಲ್ಲಿ ಹಝ್ರ್ರತ್ ಮಸೀಹ್ ಮೌಊದ್(ಅ)ರ ಆರಂಭಿಕ ಜೀವಿತದ ಬಗ್ಗೆ ಅದು ಪರಿಶುದ್ಧವಾಗಿತ್ತು ಎಂಬುದರ ಸಾಕ್ಷ್ಯವನ್ನು ಮಿಸ್ಟರ್ ಝುಫರ್ ಅಲಿ ಖಾನ್ ಸಾಹಿಬ್‌ರ ತಂದೆ ತನ್ನ ಪತ್ರಿಕೆಯಲ್ಲಿ ಬರೆದರು. ಒಟ್ಟಿನಲ್ಲಿ ನಲ್ವತ್ತು ವರ್ಷಗಳಷ್ಟು ಕಾಲ ಪರಿಶುದ್ಧ ಮತ್ತು ನ್ಯೂನತೆರಹಿತರಾಗಿದ್ದ ವ್ಯಕ್ತಿ ಹೇಗೆ ರಾತ್ರೋರಾತ್ರಿ ಬದಲಾಗಲು ಮತ್ತು ಕೆಟ್ಟು ಹೋಗಲು ಸಾಧ್ಯ? ಪ್ರತಿಯೊಂದು ನ್ಯೂನತೆ ಮತ್ತು ನೈತಿಕ ಕೆಡುಕು ಮೆಲ್ಲಮೆಲ್ಲನೆ ಉಂಟಾಗುತ್ತದೆ ಎಂದು ಮನೋರೋಗ ತಜ್ಞರು ಕೂಡ ಹೇಳುತ್ತಾರೆ. ಒಂದೇ ಸವನೇ ನೈತಿಕ ಬದಲಾವಣೆ ಉಂಟಾಗುವುದಿಲ್ಲ. ಹಝ್ರ್ರತ್ ಮಸೀಹ್ ಮೌಊದ್(ಅ)ರ ಗತಕಾಲ ಎಷ್ಟು ಪರಿಶುದ್ಧ, ನ್ಯೂನತೆರಹಿತ ಮತ್ತು ಪ್ರಕಾಶಮಾನವಾಗಿತ್ತು ಎಂದು ನೋಡಿರಿ. (ಮಿಂಯಾರೆ ಸದಾಖತ್, ಅನ್ವಾರುಲ್ ಉಲೂಮ್, ಸಂಪುಟ–6, ಪುಟ–60–61)

ಅಲ್ಲಾಹನು ಹಝ್ರ್ರತ್ ಮಸೀಹ್ ಮೌಊದ್(ಅ)ರಿಗೆ ಹೇಗೆ ನೆರವಾಗುತ್ತಿದ್ದನು ಎಂಬುದರ ಬಗ್ಗೆ ಹಝ್ರ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಅಲ್ಲಾಹನ ಪ್ರವಾದಿಯೊಂದಿಗೆ ಅಲ್ಲಾಹನ ಸಹಾಯವಿರುತ್ತದೆ. ಅಲ್ಲಾಹನ ಸಹಾಯ ಅವರೊಂದಿಗೆ ಇರದಿದ್ದರೆ ಅವರು ಅಲ್ಲಾಹನ ಪ್ರವಾದಿಯಾಗಿರಲು ಸಾಧ್ಯವಿಲ್ಲ.

ಜನರು ಅವರನ್ನು ವಧಿಸುವ ಸಾಧ್ಯತೆಯಿರುತ್ತದೆ. ಆದರೆ ಅಲ್ಲಾಹನ ಸಹಾಯ ಅವರಿಗೆ ಲಭಿಸುತ್ತದೆ. ಅವರಿಗೆ ಯಶಸ್ಸು ನೀಡುತ್ತಾನೆ. ಅವರ ಶತ್ರುಗಳ ಯೋಜನೆಗಳನ್ನು ಮಣ್ಣುಪಾಲು ಮಾಡುತ್ತಾನೆ. ಇದೇ ವ್ಯವಹಾರ ಹಝ್ರ್ರತ್ ಮಸೀಹ್ ಮೌಊದ್(ಅ)ರೊಂದಿಗೆ ಆಗಿತ್ತು. ಅವರನ್ನು ಅನೇಕ ರೀತಿಯಲ್ಲಿ ಕೊಲ್ಲಲು ಪ್ರಯತ್ನಿಸಲಾಯಿತು. ಜನರು ವಧಿಸಲಿಕ್ಕಾಗಿ ನಿಶ್ಚಯಿಸಲ್ಪಟ್ಟರು. ಆದರೆ ಅವರು ಅವರ ಉದ್ದೇಶದಲ್ಲಿ ಪರಾಜಿತರಾದರು. ಕೊಲೆಪ್ರಯತ್ನದ ಮೊಕದ್ದಮೆ ಅವರ ಮೇಲೆ ಹೊರಿಸಲಾಯಿತು.

ಅದೇ ರೀತಿಯಲ್ಲಿ ಮಿರ್ಝಾ ಸಾಹಿಬ್‌ರನ್ನು ನಾನು ನಾಶ ಮಾಡುವೆನು ಎಂದು ಮೌಲವಿ ಮುಹಮ್ಮದ್ ಹುಸೈನ್ ಬಟಾಲವಿ ಕೂಡ ವಾದಿಸುತ್ತಿದ್ದನು. ಅವರು ಹಝ್ರ್ರತ್ ಮಸೀಹ್ ಮೌಊದ್(ಅ)ರ ಬಾಲ್ಯಕಾಲದ ಸ್ನೇಹಿತರಾಗಿದ್ದರು. ಅವರೊಂದಿಗೆ ಸಂಬಂಧ ಹೊಂದಿದವರಾಗಿದ್ದರು. ಸದಾ ಅವರ ಲೇಖನಗಳನ್ನು ಪ್ರಶಂಸಿಸುತ್ತಿದ್ದರು. ಆದರೆ ಹಝ್ರ್ರತ್ ಮಸೀಹ್ ಮೌಊದ್(ಅ) ವಾದಿಸಿದ ಕೂಡಲೇ ಬಟಾಲವಿ ಹೇಳಿದನು: ನಾನೇ ಈ ವ್ಯಕ್ತಿಯನ್ನು ಮೇಲಕ್ಕೆ ಎತ್ತಿದ್ದೆ. ಈಗ ನಾನೇ ಅವರನ್ನು ನಾಶ ಪಡಿಸುವೆನು. ಒಟ್ಟಿನಲ್ಲಿ ಸ್ವಂತವರು ಮತ್ತು ಪರರು ಸೇರಿಕೊಂಡು ಹಝ್ರ್ರತ್ ಮಸೀಹ್ ಮೌಊದ್(ಅ)ರನ್ನು ಅಳಿಸಲು ಮತ್ತು ನಾಶಮಾಡಲು ಬಯಸಿದ್ದರು. ಆದರೆ ಅಲ್ಲಾಹನು ಆ ದಾಸನೊಡನೆ ಹೇಳಿದನು: ಲೋಕದಲ್ಲಿ ಒಬ್ಬ ಪ್ರವಾದಿ ಬಂದನು. ಆದರೆ ಲೋಕವು ಅವರನ್ನು ಅಂಗೀಕರಿಸಲಿಲ್ಲ. ಆದರೆ ಅಲ್ಲಾಹನು ಅವರನ್ನು ಸ್ವೀಕರಿಸುವನು ಮತ್ತು ಶಕ್ತವಾದ ದಾಳಿಗಳಿಂದ ಅವರ ಸತ್ಯತೆಯನ್ನು ಪ್ರಕಟಪಡಿಸುವನು.

ಒಬ್ಬ ನಿಸ್ಸಹಾಯಕ ವ್ಯಕ್ತಿ ಖಾದಿಯಾನ್‌ನಂತಹ ಗ್ರಾಮದಲ್ಲಿ ಹುಟ್ಟಿದ್ದನು. ಅಲ್ಲಿ ವಾರಕ್ಕೊಮ್ಮೆ ಪತ್ರಗಳು ಬರುತ್ತಿದ್ದುವು. ಅಲ್ಲಿ ಒಂದು ಪ್ರೈಮರಿ ಸ್ಕೂಲ್ ಕೂಡ ಇದ್ದಿರಲಿಲ್ಲ. ಅವರು ಒಬ್ಬ ಮೌಲವಿಯೋ ಹಿರಿದಾದ ಸೊತ್ತಿನ ಮಾಲಿಕರೋ ಆಗಿರಲಿಲ್ಲ. ನಿಸ್ಸಂಶಯವಾಗಿಯೂ ಹಝ್ರ್ರತ್ ಮಸೀಹ್ ಮೌಊದ್(ಅ) ಒಂದು ಸಭ್ಯ ಮತ್ತು ಆದರಣೀಯ ಕುಟುಂಬದಲ್ಲಿ ಹುಟ್ಟಿದ್ದರು. ಆದರೆ ರಾಜರು ಮತ್ತು ನವಾಬರ ಹಾಗೆ ಹಿರಿದಾದ ಸೊತ್ತಿನ ಮಾಲಿಕರು ಆಗಿರಲಿಲ್ಲ. ಅಂತಹ ವ್ಯಕ್ತಿಯು ಲೋಕದ ಮುಂದೆ ಎದ್ದುಕೊಂಡು ಆರಂಭ ಕಾಲದಿಂದಲೇ ಹೀಗೆ ಘೋಷಣೆ ಮಾಡುತ್ತಾರೆ: ಅಲ್ಲಾಹನು ನನ್ನ ಹೆಸರನ್ನು ಲೋಕದ ಮೂಲೆಮೂಲೆಗಳಿಗೆ ತಲುಪಿಸುವನು. ಹಝ್ರ್ರತ್ ಮಸೀಹ್ ಮೌಊದ್(ಅ)ರ ಹೆಸರು ಲೋಕದ ಮೂಲೆಗಳಿಗೆ ತಲುಪಲಿಲ್ಲವೆಂದು ಈಗ ಯಾರಿಗೆ ಹೇಳಲು ಸಾಧ್ಯ? ಹಝ್ರ್ರತ್ ಮಸೀಹ್ ಮೌಊದ್(ಅ)ರ ಹೆಸರು ತಲುಪದ ಲೋಕದ ಯಾವುದೇ ಮೂಲೆ ಈಗಿಲ್ಲವೆಂದು ನಾವು ನೋಡುತ್ತಿದ್ದೇವೆ.(ಖುತ್ಬಾತೆ ಮಹ್ಮೂದ್, ಸಂಪುಟ–1, ಪುಟ–324–325)

ಹಝ್ರ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಸುಳ್ಳುವಾದಿ ನಾಶವಾಗಲು ಅವನು ಹೇಳುವ ಸುಳ್ಳೇ ಸಾಕು. ಆದರೆ ಅಲ್ಲಾಹನ ಪರಾಕ್ರಮ ಮತ್ತು ಅವನ ಸಂದೇಶವಾಹಕರಿಗೆ ದೊರಕುವ ಅನುಗ್ರಹಗಳ ಪ್ರಕಟಣೆಯನ್ನು ಸಾಬೀತುಗೊಳಿಸಲು ಮಾಡುವ ಕೆಲಸಗಳು ಮತ್ತು ಅಲ್ಲಾಹನು ಸ್ವತಃ ತನ್ನ ಹಸ್ತದಿಂದ ನೆಟ್ಟ ಗಿಡದ ಸಂರಕ್ಷಣೆಯ ಕೆಲಸಗಳನ್ನು ದೇವದೂತರೇ ಸ್ವತಃ ಮಾಡುತ್ತಾರೆ. ಯಾರಿಗೆ ಅದನ್ನು ನಾಶ ಮಾಡಲು ಸಾಧ್ಯ? ಅವರು ಹೇಳುವ ಹಾಗೆ ನನ್ನ ಜಮಾಅತ್ ಒಂದು ವಾಣಿಜ್ಯೋದ್ಯಮವಾಗಿದ್ದರೆ ಅದು ನಾಮಾವಶೇಷವಾಗುವುದು. ಆದರೆ ಅದು ಅಲ್ಲಾಹನ ವತಿಯಿಂದ ನಿರ್ಮಿತವಾಗಿದ್ದರೆ– ಖಂಡಿತವಾಗಿಯೂ ಅದು ಅವನ ವತಿಯಿಂದಲೇ ಆಗಿದೆ – ಸರ್ವಲೋಕ ಅದನ್ನು ವಿರೋಧಿಸಿದರೂ ಅದು ವರ್ಧಿಸುವುದು. ವಿಸ್ತಾರವಾಗಿ ಹರಡುವುದು ಮತ್ತು ದೇವದೂತರು ಅದನ್ನು ಸಂರಕ್ಷಿಸುವರು. ಇನ್‌ಶಾ ಅಲ್ಲಾಹ್. ಒಬ್ಬ ವ್ಯಕ್ತಿ ಕೂಡ ನನ್ನ ಜೊತೆಗೆ ಇರದಿದ್ದರೂ ಯಾರೂ ನನಗೆ ನೆರವಾಗದಿದ್ದರೂ ಖಂಡಿತವಾಗಿಯೂ ಈ ಜಮಾಅತ್ ವಿಜಯಿಸುವುದು. ಇನ್‌ಶಾ ಅಲ್ಲಾಹ್. (ಮಲ್‌ಫೂಝಾತ್, ಸಂಪುಟ–8, ಪುಟ–148)

ನಾವು ಹಝ್ರ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡಿ ವಹಿಸಿಕೊಂಡ ಹೊಣೆಗಾರಿಕೆಗಳನ್ನು ಈಡೇರಿಸುವವರಾಗಿ, ಅವರ ಸಂದೇಶವನ್ನು ಲೋಕಕ್ಕೆ ತಲಪಿಸಿ ಅಲ್ಲಾಹನ ಅನುಗ್ರಹಗಳ ಪಾರಿತೋಷಿಕಗಳ ವಾರಸುದಾರರಾಗುವಂತೆ ಅಲ್ಲಾಹನು ಮಾಡಲಿ. ನಾವು ನಿಷ್ಠಾಹೀನರಾಗದೆ ನಿಷ್ಠಾವಂತರಲ್ಲಿ ಗಣಿಸಲ್ಪಡುವಂತಾಗಲಿ. ಅಲ್ಲಾಹನು ನಮಗೆ ಈ ಸೌಭಾಗ್ಯ ದಯಪಾಲಿಸಲಿ – ಆಮೀನ್.

ಇಂದು ನಾನು ಒಂದು ವೆಬ್‌ಸೈಟನ್ನು ಲಾಂಚ್ ಮಾಡುವುದರ ಘೋಷಣೆ ಮಾಡುತ್ತಿದ್ದೇನೆ. ಹಝ್ರ್ರತ್ ಮಸೀಹ್ ಮೌಊದ್(ಅ)ರ ಸಂದೇಶವನ್ನು ಲೋಕದ ಮೂಲೆಮೂಲೆಗೆ ತಲುಪಿಸಲು ಇದೂ ಒಂದು ಮಾರ್ಗವಾಗಿದೆ. ಇದು ಕುರ್ದಿಶ್ ಭಾಷೆಯ ಜಮಾಅತಿನ ವೆಬ್‌ಸೈಟ್ DVz É islamahmadiyya.Krd ಎಂದಾಗಿದೆ. ಇದರ ಮೇಲ್ನೋಟ ಡಾಕ್ಟರ್ ಇಸ್ಮಾಈಲ್ ಸಾಹಿಬ್ ಮಾಡುತ್ತಿದ್ದಾರೆ. ಅವರೊಂದಿಗೆ ಕುರ್ದಿಶ್ ಜಮಾಅತಿನ ಮೆಂಬರ್‌ಗಳ ಒಂದು ಟೀಮ್ ಇದೆ. ಈ ವೆಬ್‌ಸೈಟ್ ಮೂಲಕ ಕುರ್ದಿಶ್ ಭಾಷೆಯನ್ನು ಬಲ್ಲವರು ಪ್ರಥಮ ಸಾರಿ ಅಹ್ಮದಿಯಾ ಜಮಾಅತ್ ಬಗ್ಗೆ ತಮ್ಮ ಭಾಷೆಯಲ್ಲಿ ತಿಳಿದುಕೊಳ್ಳುವರು. ಈ ವೆಬ್‌ಸೈಟಿನಲ್ಲಿ ವಾರ್ತೆಗಳು, ಲೇಖನಗಳು, ವ್ಯಾಖ್ಯಾನ ಪುಸ್ತಕಗಳು, ಜುಮಾ ಖುತ್ಬಗಳು ಮತ್ತು ವೀಡಿಯೋ ಒಳಗೊಂಡಿವೆ. ಕುರ್ದಿಶ್ ತರ್ಜುಮೆ ಸಮಿತಿಯ ನೆರವಿನಿಂದ ಈ ವೆಬ್‌ಸೈಟಿನಲ್ಲಿ ಹಝ್ರ್ರತ್ ಮಸೀಹ್ ಮೌಊದ್(ಅ)ರ ಅನೇಕ ಪುಸ್ತಕಗಳಲ್ಲದೇ ಜಮಾಅತಿನ ಇತರ ಪುಸ್ತಕಗಳು ಕೂಡ ಒದಗಿಸಿ ಕೊಡಲಾಗಿದೆ. ಹಝ್ರ್ರತ್ ಮಸೀಹ್ ಮೌಊದ್(ಅ)ರ ಗ್ರಂಥಗಳು, ಹಝ್ರ್ರತ್ ಖಲೀಫತುಲ್ ಮಸೀಹ್ ಸಾನಿಯರ ಗ್ರಂಥಗಳು ಮತ್ತು ಜಮಾಅತಿನ ಇತರ ಸಾಹಿತ್ಯಗಳು ಇವೆ. ಇಸ್ಲಾಂ ಧರ್ಮ ತತ್ವಜ್ಞಾನ, ಈಸಾ ಮಸೀಹ್ ಭಾರತದಲ್ಲಿ, ಇಮಾಮಿನ ಆವಶ್ಯಕತೆ, ಮಹ್‌ದಿಯ ನೈಜತೆ, ದಅ್‌ವತುಲ್ ಅಮೀರ್, ಖಿಲಾಫತಿನ ಸ್ಥಾನಮಾನ ಇತ್ಯಾದಿ ಗ್ರಂಥಗಳು ಇವೆ. ಜುಮಾದ ನಂತರ ಇದನ್ನು ಲಾಂಚ್ ಮಾಡಲಾಗುವುದು. ಇನ್‌ಶಾ ಅಲ್ಲಾಹ್. ಅಲ್ಲಾಹನು ಅನುಗ್ರಹಿಸಲಿ.

ಅದೇ ರೀತಿಯಲ್ಲಿ ಲೋಕದ ಸ್ಥಿತಿಯ ಬಗ್ಗೆ ಪ್ರಾರ್ಥನೆಯನ್ನು ಮುಂದುವರಿಸಿರಿ. ಸರ್ವಶಕ್ತನಾದ ಅಲ್ಲಾಹನು ಲೋಕವನ್ನು ವಿನಾಶದಿಂದ ರಕ್ಷಿಸುವವನಾಗಲಿ. ಮನುಷ್ಯರಿಗೆ ಅಲ್ಲಾಹನು ವಿವೇಕ ನೀಡಲಿ. ಅವರು ತಮ್ಮ ಸೃಷ್ಟಿಕರ್ತನನ್ನು ಗುರುತಿಸುವಂತಾಗಲಿ – ಆಮೀನ್.

*********

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಮೊದಲನೆಯವನಿಗಿಂತ ಕಠಿಣವಾಗಿತ್ತು ಎನ್ನಲಾಗುವುದಿಲ್ಲ. ಏಕೆಂದರೆ ಮೊದಲ ವ್ಯಕ್ತಿಯೇ ಆತನನ್ನು ಉತ್ತೇಜಿಸಿರುತ್ತಾನೆ. ಆದುದರಿಂದ ಅಲ್ಲಾಹನು ಬಲ್ಲವನಾಗಿದ್ದಾನೆ. ನಮ್ಮದು ಅದೇ ಸ್ಥಿತಿಯಾಗಿದೆ. ಆ ವ್ಯಕ್ತಿಯ ಮೇಲೆ ಒಂದಲ್ಲ ಸಾವಿರ ರೀತಿಯ ವಿಷಾದ ಅವನು ಅದನ್ನು ಮನಗಾಣಲಿಲ್ಲ. ತಿಳಿದು ತಿಳಿದು ಬೇಕಂತಲೇ ತಮ್ಮ ಸ್ವಾರ್ಥದಿಂದಾಗಿ ಸುಳ್ಳನ್ನು ಬಳಸಿದ್ದಾನೆ. ಅಂಜುಮನ್ ಹಿಮಾಯತ್ ಇಸ್ಲಾಂ ಅಥವಾ ಅದರ ಸಹಪಾಠಿಗಳ ಅಭಿಪ್ರಾಯವು 6 ಮೇ 1898 ಪತ್ರಿಕೆ ಅಬ್‌ಝುರವರ್ ರಂತೆಯೇ ಇದ್ದರೆ ಎಲ್ಲ ಕಠಿಣ ಪದಗಳು ಇಸ್ಲಾಂ ಧರ್ಮದ ಒಂದು ಪಂಥವು ನನ್ನ ಕಡೆ ಬೊಟ್ಟು ಮಾಡುತ್ತಿದೆ. ಅವರು ನೋಡಿಕೊಳ್ಳಲಿ. ಅದಕ್ಕಿಂತ ಮೊದಲು ಆರೋಪಿಸುವವರ ಬರಹಗಳು ಸಭ್ಯವಾಗಿದ್ದವು. ಅವರ ಗ್ರಂಥಗಳಲ್ಲಿ ಯಾವ ರೀತಿಯ ಕಠಿಣ ಪದವಿರಲಿಲ್ಲ ಎಂದಾದರೆ ಅದಕ್ಕಿಂತ ಸುಳ್ಳು ಅಧರ್ಮ ಅದನ್ನು ಹೇಳುವ ಅಗತ್ಯವೇ ಇಲ್ಲ. ಪ್ರತಿಯೊಬ್ಬ ವ್ಯಕ್ತಿಯು ಗ್ರಂಥಗಳ ರಚನೆಯ ದಿನಾಂಕವನ್ನು ಸ್ವಯಂ ಪರಿಗಣಿಸಿ ನಿರ್ಣಯಿಸಿಕೊಳ್ಳಲಿ, ನಮ್ಮ ಗ್ರಂಥಗಳು ಮೊದಲು ಕಠಿಣ ಶಬ್ಧಗಳನ್ನು ಬಳಸಿ ಬರೆಯಲಾಗಿತ್ತೇ ಅಥವಾ ನಂತರ ರಕ್ಷಣಾತ್ಮಕವಾಗಿ ಬರೆಯಲಾಗಿದೆಯೇ.

**ಒಂದು ಸಾವಿರ ರೂಪಾಯಿಗಳ ವೈಭವಯುತ ಬಹುಮಾನದ ಪಂಥಾಹ್ವಾನ**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ನಾನು ಸತ್ಯವಾಗಿ ಈ ಮಾತನ್ನು ಬರೆಯಬಯಸುತ್ತೇನೆ.

ಯಾರೊ ಒಬ್ಬರ ದೃಷ್ಟಿಯಲ್ಲಿ ಅಪಶಬ್ಧಗಳನ್ನು ಬಳಸುವುದರಲ್ಲಿ ನಾನೇ ಅಡಿಪಾಯ ಹಾಕಿರುತ್ತೇನೆ, ನನ್ನ ಗ್ರಂಥಗಳಿಂದಲೇ ಇತರ ಸಮುದಾಯಗಳಿಗೆ ನೋವುಂಟಾಗಿದೆ, ಅವಹೇಳನ ಮಾಡಲಾಗಿದೆ ಎಂದಾದರೆ ಅವನು 'ಆಬ್‌ಝುರವರ್' ನ ಸಂಪಾದಕನೇ ಆಗಲಿ ಅಥವ ಅಂಜುಮನ್ ಹಿಮಾಯತೆ ಇಸ್ಲಾಂ ಲಾಹೋರಿನ ಯಾವನೇ ಸದಸ್ಯನಾಗಲಿ, ಅವರು ಇವೆಲ್ಲ ಅಶ್ಲೀಲ ಭಾಷೆಗಳಿಗೆ ನಾನೇ ಜವಾಬ್ದಾರ ಎಂದು ಸಾಬೀತುಗೊಳಿಸಲಿ, ಇವೆಲ್ಲ ಅಶ್ಲೀಲ ಭಾಷೆ ಪಾದರಿ ಪಂಡಲ್‌ನಿಂದ ಪ್ರಾರಂಭಗೊಂಡು ಉಮ್ಮಹಾತುಲ್ ಮೂಮಿನೀನ್ ತನಕ ತಲುಪಿತು. ಅಥವಾ ಇಂದ್ರಮನ್‌ನಿಂದ ಪ್ರಾರಂಭಗೊಂಡು ಲೇಖರಾಮನಲ್ಲಿ ಅಂತ್ಯಗೊಂಡಿತು. ನನ್ನ ಕಾರಣ ಇವು ಆರಂಭವಾಗಿವೆ ಎಂದಾದರೆ ಅಂತಹ ವ್ಯಕ್ತಿಗೆ ದಂಡರೂಪದಲ್ಲಿ ಸಾವಿರ ರೂಪಾಯಿ ನಗದು ನೀಡಲು ಸಿದ್ಧನಿದ್ದೇನೆ. (ಅದೇ ಪುಟ 385–389).

ಮುಂದಿನ ಸಂಚಿಕೆಯಲ್ಲಿ ನಾವು ಇನ್‌ಶಾಅಲ್ಲಾಹ್ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಇನ್ನೊಂದು ಬಹುಮಾನದ ಪಂಥಾಹ್ವಾನ ಓದುಗರ ಸೇವೆಯಲ್ಲಿ ಪ್ರಸ್ತುತಪಡಿಸುವೆವು.

**(ಮನ್ಸೂರ್ ಅಹ್ಮದ್ ಮಸ್ರೂರ್)**

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಹೊರತು ಅವರಿಗೆ ಬೇರೆ ಉದ್ದೇಶವಿಲ್ಲ ಎಂದಾಗಿದೆ.

ಹದೀಸಿನಲ್ಲಿದೆ. ವಲಸೆ ಹೋಗುವುದರಲ್ಲಿ ಹಲವು ವಿಧಗಳಿವೆ. ಒಬ್ಬನು ತನ್ನ ಹೆಂಡತಿಗೋಸ್ಕರ ವಲಸೆ ಹೋಗುತ್ತಾನೆ. ಒಬ್ಬನು ಸಂಪಾದನೆಗಾಗಿಯಾದರೆ ಮತ್ತೊಬ್ಬನು ಅಲ್ಲಾಹನಿಗಾಗಿ, ಹಾಗೆ ಆ ಜನರು ಕೇವಲ ಅಲ್ಲಾಹನಿಗೊಸ್ಕರ ತಮ್ಮ ಸ್ವದೇಶನ್ನು ತೊರೆಯುವವರಾಗಿದ್ದಾರೆ. ಇಂದು ಶತ್ರುಗಳು ಆರೋಪಿಸುತ್ತಾರೆ. ಮುಸಲ್ಮಾನರು ಹಣಕ್ಕಾಗಿ ಯುದ್ಧಗಳನ್ನು ಮಾಡಿದರು ಎಂದು. ಆ ಅದೃಶ್ಯ ವಿಚಾರಗಳನ್ನು ಜ್ಞಾನಿಯಾದ ಅಲ್ಲಾಹನಿಗೆ ತಿಳಿದಿತ್ತು. ಅವನ ಪರಿಶುದ್ಧ ದಾಸರ ಮೇಲೆ ಅಂತಹ ಆರೋಪಗಳನ್ನು ಮಾಡುವರು ಎಂದು, ಆದುದರಿಂದ ಅವನು ಯುದ್ದಗಳು ಪ್ರಾರಂಭವಾಗುವ ಮೊದಲೇ ಅಂತಹ ಆರೋಪಗಳ ಉತ್ತರವನ್ನು ನೀಡಿದನು.

2) ಅದರರ್ಥ ಫೀ ದೀನಿಲ್ಲಾಹಿ ಅಂದರೆ ಅವರು ಧರ್ಮಕ್ಕಾಗಿ ಸ್ವದೇಶವನ್ನು ತೊರೆಯುವವರಾಗಿದ್ದಾರೆ ಎಂದರ್ಥ. ಅಂದರೆ ಸ್ವದೇಶವನ್ನು ತೊರೆಯುವವನ ಉದ್ದೇಶ ಧರ್ಮಕ್ಕಾಗಿ ಕಾರ್ಯ ಮಾಡುವ ಸ್ವಾತಂತ್ರ್ಯ ಇಲ್ಲದ ಕಾರಣವಾಗಿದೆ. ಆದುದರಿಂದ ಅವರು ಎಲ್ಲಿ ಧರ್ಮ ಪ್ರಚಾರದ ಸ್ವಾತಂತ್ರ್ಯವಿದೆಯೋ ಆ ಸ್ಥಳಕ್ಕೆ ಹೋಗ ಬಯಸುತ್ತಾರೆ.

(3) ಫೀ ಎಂಬ ಅರ್ಥವು ಹೆಚ್ಚು ಪ್ರಚಲಿತವಿರುವ ಅರ್ಥದಂತೆಯೇ ಪರಿಗಣಿಸಬೇಕಾಗುತ್ತದೆ. ಅಂತಹ ಸಂದರ್ಭದಲ್ಲಿ ಅದರ ಅರ್ಥ ಅವರು ಅಲ್ಲಾಹನಿಗೋಸ್ಕರವೇ ವಲಸೆ ಹೋದರು ಎಂದಾಗುತ್ತದೆ. ಅಂದರೆ ಅವರು ಸಂಪೂರ್ಣವಾಗಿ ಅಲ್ಲಾಹನಿಗೆ ಶರಣಾದರು ಎಂದರ್ಥ ಮತ್ತು ಅವನ ಗುಣಗಳನ್ನು ಸಮೀಕರಿಸಿದರು. ಹಾಗೂ ತನ್ನ ಸ್ವೇಚ್ಛಾಚಾರಗಳನ್ನು ಬಿಟ್ಟು ತಮ್ಮ ಎಲ್ಲಾ ಕಾರ್ಯಗಳನ್ನು ಅಲ್ಲಾಹನಿಗಾಗಿ ಸಮರ್ಪಿಸಿದರು ಎಂದರ್ಥ. ಹಾಗೆ ಅವರ ಮಕ್ಕದಿಂದ ಅಗಲಿಕೆಯು ಕೆಲ ಜನರ ವಲಸೆ ಹೋಗುವುದು ಆಗಿರಲಿಲ್ಲ. ಬದಲು ಅಲ್ಲಾಹನೇ ಮಕ್ಕದಿಂದ ಹೊರಟುಹೋದಂತಾಗಿತ್ತು. ಅವರ ವಲಸೆ ಹೊಗುವ ಜೊತೆಯಲ್ಲಿಯೇ ಮಕ್ಕದ ಜನರಿಂದ ಅಲ್ಲಾಹನು ದೂರವಾದಂತಾಗಿತ್ತು.

ಮಿಮ್ ಬಅದಿ ಮಾ ಝುಲಿಮು ಅಂದರೆ ಅವರ ವಲಸೆ ವಿನಾಕಾರಣ ಆಗಿರಲಿಲ್ಲ. ಬದಲು ಅಲ್ಲಿಯ ಜನರು ಅವರಿಗೆ ಇರಲು ಬಿಡದೆ ಅವರನ್ನು ಅಲ್ಲಿಂದ ತೆರಳಲು ವಿವಶನನ್ನಾಗಿ ಮಾಡಿದ ಕಾರಣವಾಗಿತ್ತು.

ಈ ವಚನದಿಂದ ಸಿದ್ಧವಾಗುವುದೇನೆಂದರೆ ಸತ್ಯವಿಶ್ವಾಸಿಯಾದವನು ದೌರ್ಜನ್ಯಕ್ಕೆ ಒಳಗಾಗುವವರೆಗೆ ಮತ್ತು ಪ್ರಚಾರಕ್ಕಾಗಿ ಸಂಪೂರ್ಣ ತಡೆ ಒಡ್ಡುವವರೆಗೆ ತಮ್ಮ ಸ್ವದೇಶವನ್ನು ತೊರೆಯಬಾರದು ಎಂದಾಗಿದೆ ಮತ್ತು ಅಲ್ಲಿಯವರೆಗೆ ತಮ್ಮ ಧರ್ಮ ಪ್ರಚಾರಗಳನ್ನು ಮುಂದುವರೆಸಿಕೊಂಡು ಹೋಗಬೇಕೆಂದಾಗಿದೆ.

**(ತಫ್ಸೀರ್ ಕಬೀರ್, ಸಂಪುಟ 4, ಪುಟ 169 ಮುದ್ರಣ 2010)**

## ರಮಝಾನುಲ್ ಮುಬಾರಕ್ ಮತ್ತು ವಕ್ಫ್ ಎ ಜದೀದ್

ಅಲ್‌ಹಮ್ದುಲಿಲ್ಲಾಹ್! ರಮಝಾನುಲ್ ಮುಬಾರಕ್‌ನ ಅನುಗ್ರಹದಾಯಕ ಪವಿತ್ರ ಮಾಸವು ಪ್ರಾರಂಭವಾಗಿದೆ ಹಝ್ರತ್ ಖಲೀಫತುಲ್ ಮಾಸಿಹ್ ರಾಬಿ(ರ) ಹೇಳುತ್ತಾರೆ:

ಈಗ ರಮಝಾನ್‌ನ ಪವಿತ್ರ ಮಾಸವಾಗಿದೆ ಮತ್ತು ಈ ಲೇಖನವನ್ನು ನಾನು ಮೂಲತಃ ವಕ್ಫ್ ಎ ಜದೀದ್‌ಗಾಗಿ ಪ್ರಾರಂಭಿಸಿದ್ದು ಇದನ್ನು ನಾನು ರಮಝಾನ್‌ನೊಂದಿಗೆ ಸಂಯೋಜಿಸಲು ಬಯಸುತ್ತೇನೆ ಆದ್ದರಿಂದ ರಮಝಾನ್‌ನ ಅನುಗ್ರಹಗಳಲ್ಲಿ ವಕ್ಫ್ ಎ ಜದೀದ್ ಹಾಗೂ ವಕ್ಫ್ ಎ ಜದೀದ್‌ನ ಅನುಗ್ರಹಗಳಲ್ಲಿ ರಮಝಾನ್‌ನ ಅನುಗ್ರಹವು ಒಳಗೊಳ್ಳಲಿ. (ಖುತ್ಬ ಜುಮುಅ, ಜನವರಿ 2, 1998)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

ನೀವು ಇಸ್ಲಾಂ ಧರ್ಮವನ್ನು ಬೆಂಬಲಿಸಲು ನಿಮ್ಮ ಉದಾರತೆಯ ಹಸ್ತವನ್ನು ತೆರೆದರೆ, ತಕ್ಷಣವೇ ಪ್ರಕೃತಿಯ ಕೈ ನಿಮಗೆ ಕಾಣಿಸಿಕೊಳ್ಳುತ್ತದೆ. ಹೀಗೆ ಖರ್ಚು ಮಾಡುವುದರಿಂದ ಯಾರೂ ಸಹ ಬಡವನಾಗುವುದಿಲ್ಲ. ಧೈರ್ಯ ಮಾಡಿದರೆ, ಅಲ್ಲಾಹನೇ ಸಹಾಯಕನಾಗುತ್ತಾನೆ."

(ಮಜ್‌ಮೂಅ ಇಶ್ತಿಹಾರಾತ್, ಸಂಪುಟ–2, ಪುಟ–613)

ಹೀಗಾಗಿ ಜಮಾಅತ್ತಿನ ಎಲ್ಲಾ ಸದಸ್ಯರು ಈ ರಮಝಾನ್‌ನ ಅನುಗ್ರಹದಾಯಕ ದಿನಗಳಲ್ಲಿ ವಾಗ್ದಾನ ನೀಡಿದಂತೆ ಪೂರ್ಣ ಮೊತ್ತವನ್ನು ಪಾವತಿಸಲು ವಿನಂತಿಸಲಾಗಿದೆ. ಅಲ್ಲಾಹನು ಇದನ್ನು ಪಾವತಿಸಲು ನಮ್ಮೆಲ್ಲರಿಗೂ ಅನುಗ್ರಹಿಸಲಿ ಮತ್ತು ಅಲ್ಲಾಹನು ಎಲ್ಲಾ ಜಮಾಅತ್ತಿನ ಸದಸ್ಯರಿಗೆ ಅಸಾಮಾನ್ಯ ಅನುಗ್ರಹಗಳನ್ನು ನೀಡಲಿ. ಆಮೀನ್.

**(ನಾಝಿಮ್ ಮಾಲ್ ವಕ್ಫ್ ಎ ಜದೀದ್ ಭಾರತ್)**

## ಖಾದಿಯಾನ್ ದಾರುಲ್ ಆಮಾನ್‌ನಲ್ಲಿ ವಾರ್ಷಿಕ ಇಜ್ತೆಮಾ ನಡೆಯುವ ದಿನಾಂಕಗಳು

ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು ಭಾರತದಲ್ಲಿ ಅಂಗ ಸಂಸ್ಥೆಗಳ (ಮಜ್ಲಿಸ್ ಅನ್ಸರುಲ್ಲಾ, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಲಜ್ನಾ ಇಮಾಇಲ್ಲಾ) ರಾಷ್ಟ್ರೀಯ ವಾರ್ಷಿಕ ಕೂಟಗಳನ್ನು (ಇಜ್ತೆಮಾ) 21, 22 ಮತ್ತು 23ನೇ ಅಕ್ಟೋಬರ್ 2022 ರಂದು (ಶುಕ್ರವಾರ, ಶನಿವಾರ, ಭಾನುವಾರ) ಆಯೋಜಿಸಲು ಅನುಮತಿ ನೀಡಿದ್ದಾರೆ.

ಎಲ್ಲಾ ಉಪ ಸಂಸ್ಥೆಗಳ ಸದಸ್ಯರು ಖಾದಿಯಾನಿನಲ್ಲಿ ಈ ಆಧ್ಯಾತ್ಮಿಕ ಪರಿಸರದಲ್ಲಿ ಆಯೋಜಿಸಲಾಗುವಂತಹ ಇಜ್ತೆಮಾಗಳಲ್ಲಿ ಪಾಲ್ಗೊಳ್ಳಲು ಇಂದಿನಿಂದಲೆ ತಯಾರಿ ಪ್ರಾರಂಭಿಸಿರಿ. ಈ ಇಜ್ತೆಮಾಗಳು ತರಬೇತಿಯ ಮುಖ್ಯ ಮೂಲವಾಗಿದೆ.

**(ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತ)**

## ಝಕಾತ್ ಒಂದು ಕಡ್ಡಾಯ ಪ್ರಮುಖ ಕರ್ಮವಾಗಿದೆ. ಅದರ ಪಾಲನೆಯ ಕಡೆ ವಿಶೇಷ ಗಮನವಹಿಸಬೇಕು!

ಜಮಾಅತ್ ಬಂಧುಗಳು ತಿಳಿದವರೇ ಆಗಿದ್ದಾರೆ. ಪವಿತ್ರ ಖುರ್‌ಆನ್‌ನಲ್ಲಿ ನಮಾಝ್ ನಿರ್ವಹಣೆ ಜೊತೆ ಜೊತೆಯಲ್ಲಿ ಝಕಾತಿನ ನಿರ್ದೇಶನವಿದೆ. ಆದುದರಿಂದ ಎಲ್ಲಾ ಅರ್ಹ ಬಂಧು ಭಗಿನಿಯರಲ್ಲಿ ವಿನಂತಿಸಿ ಕೊಳ್ಳುವುದೇನೆಂದರೆ ಅವರು ಈ ಪ್ರಮುಖ ಕಡ್ಡಾಯ ನಿರ್ವಹಣೆಯತ್ತ ಗಮನ ಹರಿಸಬೇಕಾಗಿದೆ.

ಝಕಾತ್ ಇಸ್ಲಾಮಿನ ಮೂಲಭೂತ ಸಿದ್ಧಾಂತವಾಗಿದೆ. ಅದು ಎಲ್ಲಾ ನಿಗದಿತ ಅರ್ಹ ಜನರಿಗೆ ಕಡ್ಡಾಯವಾಗಿದೆ. ಆ ಪೈಕಿ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಓ ಎಲ್ಲಾ ನನ್ನ ಜಮಾಅತಿಗೆ ಸೇರಿದವರೆಂದು ಹೇಳುವ ಜನರೇ! ನೀವು ಆಕಾಶದಲ್ಲಿ ನಿಜವಾಗಿಯೂ ಭಯಭಕ್ತಿಯ ಮಾರ್ಗಗಳಲ್ಲಿ ನಡೆದವರಾದಾಗ ಮಾತ್ರ ನನ್ನ ಜಮಾಅತಿಗೆ ಸೇರಿದವರಾಗುವಿರಿ. ಆದುದರಿಂದ ತನ್ನ ಐದು ಹೊತ್ತಿನ ನಮಾಝುಗಳನ್ನು ಎಂಥ ಭಯ ಮತ್ತು ಆತ್ಮೀಯವಾಗಿ ನಿರ್ವಹಿಸಬೇಕೆಂದರೆ, ಅಲ್ಲಾಹನು ನಿಮ್ಮನ್ನು ನೋಡುತ್ತಿದ್ದಾನೆ ಎಂದಾಗಿರಬೇಕು. ಅಂತೆಯೇ ತನ್ನ ಉಪವಾಸಗಳನ್ನು ಅಲ್ಲಾಹನಿಗೋಸ್ಕರ ಪೂರ್ಣ ಶ್ರದ್ಧೆಯಿಂದ ಪಾಲಿಸುವವರಾಗಿರಿ. ಝಕಾತ್‌ಗೆ ಅರ್ಹರಾದ ಪ್ರತಿಯೊಬ್ಬರು ಝಕಾತ್ ನೀಡಬೇಕು. **(ಕಿಶ್ತಿ ನೂಹ್, ರೂಹಾನಿ ಖಝಾಇನ್, ಸಂಪುಟ–19, ಪುಟ–15)**

ಆಭರಣಗಳ ಝಕಾತ್ ನೀಡುವಿಕೆ ಕುರಿತು ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ನೀವು ಉಪಯೋಗಿಸುವ ಆಭರಣಗಳು ಮತ್ತು ಒಮ್ಮೊಮ್ಮೆ ಬಡ ಸ್ತ್ರೀಯರಿಗೆ ಉಪಯೋಗಿಸಲು ನೀಡುವ ಆಭರಣಗಳು ಕುರಿತು ಕೆಲವರು ಭಾವಿಸುವುದೇನಂದರೆ ಅದರ ಮೇಲೆ ಝಕಾತ್ ಕಡ್ಡಾಯವಲ್ಲ ಎಂದು. ಮತ್ತು ಯಾವ ಆಭರಣಗಳು ಉಪಯೋಗಿಸಲಾಗುತ್ತದೆಯೋ ಮತ್ತು ಇತರರಿಗೆ ಬಳಸಲು ಕೊಡುವುದಿಲ್ಲವೋ ಆ ಆಭರಣಗಳ ಮೇಲೆ ಝಕಾತ್ ಕೊಡಬೇಕಾಗಿದೆ ಎಂದು. ಏಕೆಂದರೆ ಅದು ತನ್ನ ಸ್ವಂತಕ್ಕಾಗಿ ಬಳಸಲ್ಪಡುತ್ತದೆ. ನಮ್ಮ ಮನೆಗಳಲ್ಲಿ ಅದೇ ತರಹ ಕ್ರಮಬದ್ಧರಾಗಿರುತ್ತಾರೆ. ಮತ್ತು ಪ್ರತಿ ವರ್ಷ ತನ್ನ ಆಭರಣಗಳ ಝಕಾತನ್ನು ನೀಡುತ್ತಾರೆ. ಮತ್ತು ಯಾವ ಆಭರಣಗಳು ರೂಪಾಯಿಗಳಂತೆ ಜಮಾ ಮಾಡಿ ಇಡುತ್ತಾರೋ. ಅದರ ಝಕಾತ್ ಕೊಡುವುದರಲ್ಲಿ ಯಾರಿಗೂ ತಕರಾರು ಇಲ್ಲ. **(ಅಲ್–ಹಕಮ್ 17 ನವೆಂಬರ್ 1905, ಪುಟ 11)**

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್[ರ] ಹೇಳುತ್ತಾರೆ: "ನೆನಪಿಡಬೇಕಾದ ವಿಷಯವೇನೆಂದರೆ ಈ ತೆರಿಗೆಯನ್ನು ನಾವು 'ಝಕಾತ್' ಎನ್ನುತ್ತೇವೆ. ಇದು ಆದಾಯದ ಮೇಲೆ ನಿರ್ಧಾರವಲ್ಲ. ಬದಲು ಬಂಡವಾಳ ಹಾಗೂ ಲಾಭ ಎಲ್ಲವೂ ಸೇರಿಸಿ ನೀಡಲಾಗುತ್ತದೆ. ಅದೇ ರೀತಿ 2.50% ವಾಸ್ತವದಲ್ಲಿ ಕೆಲ ಸಂಧರ್ಭಗಳಲ್ಲಿ ಲಾಭದ 50% ದಷ್ಟಾಗುತ್ತದೆ" **(ಅಹ್ಮದಿಅತ್ ಯಾನಿ ಹಖೀಖಿ ಇಸ್ಲಾಮ್, ಅನ್ವಾರುಲ್ ಉಲೂಮ್, ಸಂಪುಟ–8, ಪುಟ–306)**

ಆಭರಣಗಳು ಮತ್ತು ನಗದು ರೂಪಾಯಿಯ ಝಕಾತಿಗೆ ನಿರ್ಧರಿತ ಕ್ರಮದ ಕುರಿತು ಸಯ್ಯದ್‌ನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಅಲ್–ಖಾಮಿಸ್(ಅಬಿಅ) ಹೇಳುತ್ತಾರೆ. ಬೆಳ್ಳಿಗ್ಗೆ ಬೆಳ್ಳಿ ಮತ್ತು ಚಿನ್ನಕ್ಕೆ ಚಿನ್ನವೇ ನಿರ್ಧಾರಿತ ಕ್ರಮವಾಗಿರುವುದು. ಅದು ರಸೂಲುಲ್ಲಾಹ್(ಸ) ರವರ ಪರಿಶುದ್ಧ ಕಾಲದಲ್ಲಿ ರಸೂಲುಲ್ಲಾಹ್(ಸ) ಸ್ವಯಂ ಜಾರಿಗೆ ತಂದಿದ್ದರು. ಎಲ್ಲಿಯವರೆಗೆ ನಗದು ರೂಪಾಯಿಗಳ ನಿರ್ಧರಿತ ಕ್ರಮದ ಪ್ರಶ್ನೆ ಇದೆಯೋ ಅದನ್ನು ಪ್ರಸಕ್ತ ಸಮಯ ಲೋಕವು ಚಿನ್ನವನ್ನೇ ಬಂಡವಾಳ ಎಂದು ಒಪ್ಪಿಕೊಂಡಿದೆ. ಆದುದರಿಂದ ನಗದು ರೂಪಾಯಿಗಳ ಝಕಾತ್ ಕೂಡ ಚಿನ್ನದ ಮಾನದಂಡದಂತೆಯೇ ಕೊಡಲಾಗುತ್ತದೆ. (ಮ್ಹಕ್ತೂಬ್ ಹುಝೂರ್[ಅತಬಿಅ] ಬನಾಮ್ ಸದರ್ ಸಾಹಿಬ್ ಮಜ್ಲಿಸ್ ಇಫ್ತಾಹ್)

ರಸೂಲುಲ್ಲಾಹ್(ಸ) ಬೆಳ್ಳಿಗೋಸ್ಕರ 52 ವರೆ ತೊಲ (52.5) ಚಿನ್ನಕ್ಕೊಸ್ಕರ ಏಳುವರೆ ತೊಲ (7.5) ನಿಗದಿಪಡಿಸಲಾಗಿದೆ.

* ಯಾರ ಬಳಿ ಐವತ್ತೆರಡುವರೆ (52.5) ತೊಲ 612 ಗ್ರಾಂ ಬೆಳ್ಳಿ ಇದೆಯೋ ಮತ್ತು ಅದು ಅವರ ಬಳಿ ಒಂದು ವರ್ಷ ಆದರೆ. ಆಗ ಅದರ 1/40 ಭಾಗ ಅಂದರೆ ಎರಡುವರೆ ಪ್ರತಿಶತ ಝಕಾತ್ ನೀಡುವುದು ಕಡ್ಡಾಯವಾಗಿರುತ್ತದೆ.

ಅದೇ ರೀತಿ ಯಾರ ಬಳಿ ಏಳುವರೆ (7.5) ತೊಲ 87 ಗ್ರಾಂ ಚಿನ್ನವಿರುತ್ತದೆ. ಅಥವಾ ಅದಕ್ಕೆ ಸಮನಾದ ನಗದು ಹಣದ ರಾಶಿಯಿರುತ್ತದೆ. ಅದರ ಮೇಲೆ ಒಂದು ವರ್ಷ ಅವಧಿ ಕಳೆದರೆ ಆಗ ಅದರ ಮೇಲೆಯೂ 1/40 ಭಾಗ ಅಂದರೆ ಎರಡುವರೆ ಪ್ರತಿಶತ ಝಕಾತ್ ನೀಡುವುದು ಫರ್ಝ್ (ಕಡ್ಡಾಯ) ಆಗಿರುತ್ತದೆ.

* ಝಕಾತ್ ರೂಪದಲ್ಲಿ ಪಡೆದ ಒಟ್ಟು ಮೊತ್ತ ಕೇಂದ್ರಕ್ಕೆ ರವಾನಿಸುವುದು ಅವಶ್ಯಕವಾಗಿದೆ.

ಅಲ್ಲಾಹನು ನಮಗೆಲ್ಲರಿಗೂ ಈ ಪ್ರಮುಖ ಕರ್ತವ್ಯವನ್ನು ಪಾಲಿಸಲು ಭಾಗ್ಯ ದಯಪಾಲಿಸಲಿ ಮತ್ತು ಜಮಾಅತಿನ ಎಲ್ಲಾ ಬಂಧುಗಳ ಸಂಪತ್ತು ಹಾಗೂ ಆತ್ಮಗಳಲ್ಲಿ ತನ್ನ ಅನುಗ್ರಹ ದಯಪಾಲಿಸಲಿ. **ಆಮೀನ್**

**(ಪತ್ರಿಕಾಂಗ)**

## ಸದಖತುಲ್ ಫಿತರ್ ಪಾಲನೆ

ಅಲ್‌ಹಮ್‌ದುಲಿಲ್ಲಾಹ್! ಪವಿತ್ರ ರಮಝಾನ್ ಇದೇ ಏಪ್ರಿಲ್ ತಿಂಗಳಿನ ಅಂತಿಮ ವಾರದಲ್ಲಿ ಪ್ರಾರಂಭವಾಗಲಿದೆ. ಇಸ್ಲಾಮಿನಲ್ಲಿ **"ಫಿತ್ರಾನ"** ಕೊಡಲು ಒಂದು ಸಾಅ್ (ಅಂದರೆ ಸುಮಾರು 2 ಕೆಜಿ 750 ಗ್ರಾಂ ಸಮಾನ) ನಿಗದಿ ಪಡಿಸಲಾಗಿರುತ್ತದೆ. ಜಮಾಅತ್ ಬಾಂಧವರು ನಿಗದಿತ ದರ ಪ್ರಕಾರ ಪವಿತ್ರ ರಂಝಾನಿನ ಪ್ರಥಮ ಅಥವಾ ದ್ವಿತೀಯ ದಶಕದೊಳಗೆ **"ಸದಖತುಲ್ ಫಿತರ್"** ಪಾವತಿಸಲು ಪ್ರಯತ್ನ ಪಡಬೇಕಾಗಿದೆ. ಏಕೆಂದರೆ ಭಾರತದ ರಾಜ್ಯಗಳ ಧಾನ್ಯ (ಗೋಧಿ, ಅಕ್ಕಿ) ರ ನಿಗದಿತ ದರ ಮೌಲ್ಯ ವಿಭಿನ್ನ ರೀತಿಯದ್ದಾಗಿರುತ್ತದೆ. ಆದುದರಿಂದ ಸ್ಥಳಿಯ ನಿಗದಿತ ಮೌಲ್ಯ ದರದಂತೆ ನಿಗದಿಪಡಿಸಿದ ಪ್ರಕಾರ ಫಿತ್ರಾನ ಮೊತ್ತವನ್ನು ನೀಡಬೇಕು.

ಪಂಜಾಬಿನಲ್ಲಿ ಈ ವರ್ಷ ಸದಖತುಲ್ ಫಿತರ್ ಒಬ್ಬರಿಗೆ 56/– ರೂಪಾಯಿಗಳನ್ನು ನಿಗದಿಪಡಿಸಲಾಗಿದೆ. ಸ್ಥಳಿಯ ಜಮಾಅತ್ತಿನಲ್ಲಿ ಅರ್ಹ ಬಡವಿದ್ದರಲ್ಲಿ ಸದಖತುಲ್ ಫಿತರ್‌ನ ಒಟ್ಟು ಮೊತ್ತದಲ್ಲಿ ಶೇ. 90ರ ವರೆಗೆ ಹಣವನ್ನು ಮಜ್ಲಿಸ್ ಆಮಿಲಾದ ನಿರ್ಣಯದ ಪ್ರಕಾರ ಹಂಚಬಹುದಾಗಿದೆ. ಉಳಿದ ಹಣ ಕೇಂದ್ರಕ್ಕೆ ಜಮಾ ಮಾಡಲು ಕಳುಹಿಸಬೇಕು. ಯಾವ ಜಮಾಅತ್ತಿನಲ್ಲಿ ಅರ್ಹ ಬಡವರು ಇರುವುದಿಲ್ಲವೋ ಅವರು ಜಮಾಅತ್ತಿನಲ್ಲಿ ವಸೂಲಾದ ಸಂಪೂರ್ಣ ಹಣವನ್ನು 'ಸದರ್ ಅಂಜುಮನ್ ಅಹ್ಮದಿಯಾ' ಖಾತೆಯಲ್ಲಿ ಕಳುಹಿಸತಕ್ಕದ್ದು. ನೆನಪಿರಲೀ! ಫಿತ್ರಾನದ ಹಣವನ್ನು ಮಸೀದಿಯ ಯಾವುದೇ ಅಗತ್ಯ ಕಾರ್ಯಗಳಿಗೆ ಉಪಯೋಗಿಸಿಕೊಳ್ಳಲು ಅನುಮತಿ ಇರುವುದಿಲ್ಲ.

### ಈದ್ ಫಂಡ್

ಈ ಚಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಕಾಲದಿಂದ ಖಾಯಮ್ ಆಗಿರುತ್ತದೆ. ಈ ಫಂಡಿನ ಉದ್ದೇಶವೇನಾಗಿತ್ತೆಂದರೆ ಸಂತೋಷದ ಸಮಯಗಳಲ್ಲಿ ಮನುಷ್ಯ ತನ್ನ ಸ್ವಯಂ ಸಂತೃಪ್ತಿಗಾಗಿ, ಬಟ್ಟೆಗಳಿಗಾಗಿ, ಊಟೋಪಚಾರ, ಅತಿಥಿ ಸತ್ಕಾರ ಇತ್ಯಾದಿ ಹಲವು ವಿಧಗಳ ವೆಚ್ಚ ಮಾಡುತ್ತಾನೆ. ಇತರರಿಗೂ ಉಡುಗೋರೆ ಇತ್ಯಾದಿಗಳನ್ನು ನೀಡುತ್ತಾನೆ ಅದೇ ರೀತಿ ಈ ಸುಸಂದರ್ಭದಲ್ಲಿ ಧರ್ಮ ಕಾರ್ಯಗಳ ಬಗ್ಗೆಯು ಗಮನವಿರಬೇಕು. ಅಹ್ಮದಿ ಸದಸ್ಯರು ಬೈಅತ್ ಮಾಡುವಾಗಲೇ ಈ ಕರಾರು ಒಪ್ಪಿರುತ್ತಾರೆ. ಧರ್ಮವನ್ನು ಲೋಕದ ಕಾರ್ಯಗಳ ಮೇಲೆ ಆಧ್ಯತೆ ನೀಡುವೆನು ಎಂದು. ಆದುದರಿಂದ ಪ್ರತಿ ಅಹ್ಮದಿಯರಿಂದ ನಿರೀಕ್ಷಿಸಲಾಗಿರುವುದು ಏನೆಂದರೆ ಅವರು ಸಂತೋಷ ಸಂಭ್ರಮದ ಹಬ್ಬಗಳಲ್ಲಿ ಧರ್ಮಕಾರ್ಯಗಳ ಬಗ್ಗೆಯು ಲಕ್ಷ್ಯವಹಿಸುವರು. ಈ ಉದ್ದೇಶಕ್ಕಾಗಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ತಮ್ಮ ಕಾಲದಲ್ಲಿ ಈ ಖಾತೆಗೆ ಪ್ರತಿಯೊಬ್ಬ ಆದಾಯವುಳ್ಳ ಅಹ್ಮದಿ ಒಬ್ಬರಿಗೆ ಒಂದು ರೂಪಾಯಿಯಂತೆ "ಈದ್ ಫಂಡ್: ಕೊಡಬೇಕು. ಇಂದು ಒಂದು ರೂಪಾಯಿಯ ಬೆಲೆ ಏನು ಉಳಿಯಲಿಲ್ಲ, ಆದುದರಿಂದ ಒಂದು ರೂಪಾಯಿಗೆ ಸೀಮಿತ ಪಡಿಸದೆ ನಮ್ಮ ಸಾಮರ್ಥ್ಯನುಸಾರವಾಗಿ ಕೊಡಬಹುದಾಗಿದೆ. ಒಂದು ಸಲಹೆ ಏನೆಂದರೆ ಹಬ್ಬದ ದಿವಸ ಸಾಮಾನ್ಯವಾಗಿ ಮಾಡಬಹುದಾದ ಖರ್ಚುವೆಚ್ಚದ ಅರ್ಧ ಭಾಗವನ್ನು ಈ ಖಾತೆಯಲ್ಲಿ ನೀಡಬಹುದಾಗಿದೆ. ಇದು ಕೇಂದ್ರೀಯ ಚಂದವಾಗಿರುತ್ತದೆ. ವಸೂಲಾದ ಸಂಪೂರ್ಣ ಮೊತ್ತವನ್ನು ಸದರ್ ಅಂಜುಮನ್ ಅಹ್ಮದಿಯಾ ಖಜಾನೆಯಲ್ಲಿ ಜಮಾ ಮಾಡುವುದು ಅನಿವಾರ್ಯವಾಗಿರುತ್ತದೆ. ಇದರಿಂದ ಸ್ಥಳಿಯರಿಗೆ ಯಾವುದೇ ರೀತಿಯ ಖರ್ಚು ಮಾಡಲು ಅನುಮತಿ ಇರುವುದಿಲ್ಲ.

**(ನಾಝಿರ್ ಬೈತುಲ್ ಮಾಲ್ ಅಮದ್ ಖಾದಿಯಾನ್)**

## ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ರಕ್ಷಿಸಿರಿ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ನ ಕಾಲದ ಸ್ಮರಣೀಯ ಪತ್ರಿಕೆ. **"ಅಖ್ಬಾರ್ ಬದರ್"** 1952 ರಿಂದ ಸತತವಾಗಿ ಖಾದಿಯಾನ್ ದಾರುಲ್‌ಅಮಾನಿನಿಂದ ಪ್ರಕಟಗೊಳ್ಳುತ್ತಿದೆ ಮತ್ತು ಅಹ್ಮದೀಯರ ಆಧ್ಯಾತ್ಮಿಕ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಇದರಲ್ಲಿ ಪವಿತ್ರ ಖುರ್‌ಆನಿನ ಆಯಾತ್‌ಗಳು, ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಹದೀಸ್‌ಗಳು, ಹಝ್ರತ್ ಮಸೀಹ್ ಮೌಊದ್(ಅ)ರ ಮಲ್‌ಫೂಝಾತ್ ಮತ್ತು ಬರವಣಿಗೆಗಳಲ್ಲದೆ ಹುಝೂರ್ ಅನ್ವರ್(ಅ)ರವರ ಹೊಸ ಖುತ್‌ಬ ಜುಮುಅ ಮತ್ತು ಉಪನ್ಯಾಸಗಳು, ಸಂದೇಶಗಳು, ಖುತ್‌ಬ ಜುಮುಅ ಪ್ರಶ್ನೋತ್ತರರ ರೂಪದಲ್ಲಿ ಮತ್ತು ಹುಝೂರ್ ಅನ್ವರ್‌ರವರ ಪ್ರವಾಸದ ವರದಿಗಳು, ಅದೇ ರೀತಿ ಆಧ್ಯಾತ್ಮಿಕ ಮತ್ತು ಲೌಕಿಕ ಜ್ಞಾನಗಳ ಸಂಪತ್‌ಭರಿತ ವರದಿಗಳು ಇರುತ್ತದೆ. ಅವುಗಳನ್ನು ಅಧ್ಯಯನ ಮಾಡುವುದು, ಅವುಗಳನ್ನು ಅನ್ಯರಿಗೆ ತಲುಪಿಸುವುದು ಮತ್ತು ಅದರಿಂದ ತಮ್ಮ ಮತ್ತು ತಮ್ಮ ಮಕ್ಕಳ, ಕುಟುಂಬದವರ ತರಬೇತಿ ಮಾಡುವುದು ನಮ್ಮ ಕರ್ತವ್ಯವಾಗಿದೆ. ಈ ಎಲ್ಲಾ ಉದ್ದೇಶಗಳನ್ನು ಪಡೆಯುವುದಕ್ಕೆ ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಆಧ್ಯಾತ್ಮಿಕ ಜ್ಞಾನ ಮತ್ತು ತರಬೇತಿಯನ್ನೂ ಒಳಗೊಂಡಿರುವ ಈ ಪವಿತ್ರವಾದ ಪತ್ರಿಕೆಯ ಅವಶ್ಯಕತೆ ಏನೆಂದರೆ ಅದನ್ನು ಗೌರವಿಸಬೇಕು. ಆದ್ದರಿಂದ ಇದನ್ನು ರದ್ದಿಗೆ ಹಾಕುವುದು ಅದರ ಪಾವಿತ್ರ್ಯತೆಯನ್ನು ಚದುರಿಸುವ ಸಮಾನವಾಗಿದೆ. ಅದನ್ನು ರಕ್ಷಿಸಲು ಕಷ್ಟವಾಗುತ್ತಿದ್ದರೆ ಅದನ್ನು ಎಚ್ಚರಿಕೆಯಿಂದ ನಾಶಮಾಡಿರಿ. ಏಕೆಂದರೆ ಹೀಗೆ ಆ ಪವಿತ್ರ ಬರಹಗಳು ಅವಮಾನವಾಗಬಾರದು. ಅಹ್ಮದಿ ಸದಸ್ಯರೆಲ್ಲರೂ ಈ ಬಗ್ಗೆ ವಿಶೇಷ ಗಮನ ಹರಿಸುತ್ತೀರ ಮತ್ತು ಇದರಿಂದ ಉಪಯೋಗ ಗಳಿಸುವಿರೀ ಎಂದು ಆಶಿಸುತ್ತೇವೆ.

**(ಸಂಪಾದಕ)**

## ಆಡಂಬರ ಮತ್ತು ತೋರ್ಪಡಿಕೆಗೊಸ್ಕರ ಹಕ್ಕ್ ಮಹರನ್ನು ನಿಶ್ಚಯಿಸುವುದು ತಪ್ಪು ಸಂಪ್ರದಾಯವಾಗಿರುತ್ತದೆ.

ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ:

ವಧು ಹಾಗೂ ವರನ ಕಡೆಯವರು ಇಬ್ಬರು ಸೇರಿ ರಾಜಿಯಾಗಿ ಹಕ್ಕ್ ಮಹರ್ ನಿಶ್ಚಯಿಸಿ ಕೊಳ್ಳುತ್ತಾರೆ ಇದಕ್ಕೆ ಯಾವುದೇ ಆಕ್ಷೇಪವಿಲ್ಲ. ಆದರೆ ಶರೀಅತ್ತಿನಲ್ಲಿ ಹಕ್ಕ್ ಮಹರ್ ಇಷ್ಟೇ ನೀಡಬೇಕೆಂಬ ನಿಯಮ ಅಧಿಕೃತವಾಗಿ ಹದೀಸುಗಳಲ್ಲಿ ಯಾವುದೇ ಉಲ್ಲೇಖವಿಲ್ಲ. ಆದರೆ ಆ ಸಂಧರ್ಭಕನ್ನುಸಾರ ಹಕ್ಕ್ ಮಹರ್ ನಿಶ್ಚಯಿಸಿಕೊಳ್ಳಬಹುದು. ಅಂದರೆ ಪ್ರಸಕ್ತ ಸಮಯದಲ್ಲಿನ ಜನರ ಜೀವನ ಮಟ್ಟವೇ ಆಧಾರವಾಗಿರುತ್ತದೆ.

ನಮ್ಮ ಪ್ರಾಂತ್ಯದಲ್ಲಿರುವ ಒಂದು ಕೆಟ್ಟ ಸಂಪ್ರದಾಯವೆಂದರೆ ಕೇವಲ ಹೊರ ಜಗತ್ತಿನ ತೋರಿಕೆಗಾಗಿ ಹಾಗೂ ಆಡಂಬರಕ್ಕಾಗಿ ಲಕ್ಷಾಂತರ ಹಕ್ಕ್ ಮಹರ್ ಅನ್ನು ನಿಶ್ಚಿಸಿಕೊಳ್ಳುತ್ತಾರೆ. ಆದರೆ ಅವರ ಉದ್ದೇಶ ಬೇರೆಯೇ ಅಗಿರುತ್ತದೆ. ಅದೇ ರೀತಿ ವಧುವಿನ ಕಡೆಯವರು ವರನನ್ನು ತನ್ನ ಹಿಡಿತದಲ್ಲಿ ಇರಿಸಿಕೊಳ್ಳಲು ಈ ರೀತಿಯ ಹಕ್ಕ್ ಮಹರ್‌ಅನ್ನು ನಿಶ್ಚಯಿಸಿಕೊಳ್ಳುತ್ತಾರೆ. ಆದರೆ ಇದರಿಂದ ಬೇರೆ ಅನೇಕ ಸಮಸ್ಯೆಗಳು ಉದ್ಭವವಾಗುತ್ತದೆ. **(ಮಲ್‌ಫೂಝಾತ್, ಸಂಪುಟ–3, ಪುಟ–284)**

**(ರಿಶ್ತನಾತ ವಿಭಾಗ, ನಝಾರತ್ ಇಸ್ಲಾಹ್ ವ ಇರ್ಷಾದ್, ಖಾದಿಯಾನ್)**

## *127 ನೇ ಜಲ್ಸಾ ಸಾಲಾನ ಖಾದಿಯಾನ್*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 127ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 23, 24 ಮತ್ತು 25ನೇ ಡಿಸೆಂಬರ್ 2022 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮುಲ್ಲಾಹ್.**

**(ನಾಝಿರ್ ಇಸ್ಲಾಹ್–ವ–ಇರ್‌ಶಾದ್ ಖಾದಿಯಾನ್)**

## ಜಾಗತಿಕ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ವಾರಪತ್ರಿಕೆ "ಬದರ್" ಇದೀಗ ಕನ್ನಡದಲ್ಲಿ ಪ್ರಕಟಗೊಳ್ಳುತ್ತಿದೆ.

ಈ ಪತ್ರಿಕೆಯ ಹೆಸರು **"ಬದರ್"** ಎಂದಾಗಿದೆ. ಪೂರ್ಣ ಚಂದ್ರ ಎಂದರ್ಥ. ಇದು ಜಮಾಅತೆ ಅಹ್ಮದಿಯದ ಒಂದು ಧಾರ್ಮಿಕ ಪತ್ರಿಕೆ ಆಗಿದೆ ಅದರ ಉದ್ದೇಶ ಜಮಾಅತ್ತಿನ ಸದಸ್ಯರ ತರಬೇತಿ, ಶಿಕ್ಷಣ, ಒಳ್ಳೆ ನೈತಿಕತೆ ಕಲಿಸುವುದಾಗಿದೆ.

ನಮ್ಮ ಎರಡು ಉದ್ದೇಶಗಳಿವೆ. ಒಂದು ಅಲ್ಲಾಹನ ಹಕ್ಕನ್ನು ನಿಭಾಯಿಸುವುದು ಇನ್ನೊಂದು ದಾಸರ ಹಕ್ಕನ್ನು ನಿಭಾಯಿಸುವುದಾಗಿದೆ.

ಅಲ್ಲಾಹನ ಹಕ್ಕು ಏನಾಗಿದೆ ಎಂದರೆ ಅವನನ್ನು ಆರಾಧಿಸುವುದು ಅವನು ಎಲ್ಲಾ ಸ್ತುತಿ ಸರ್ವ ಲೋಕಗಳ ಪರಿಪಾಲಕನಾಗಿದ್ದಾನೆ ಮತ್ತು ಅವನ ಉಪಕಾರಗಳನ್ನು ನೆನಪಿಸಿಕೊಂಡು ಅವನಿಗೆ ವಿಧೇಯತೆ ತೋರಿಸುವುದಾಗಿದೆ.

ಇನ್ನೊಂದು ದಾಸರ ಹಕ್ಕನ್ನು ನಿಭಾಯಿಸುವುದಾಗಿದೆ. ದಾಸರ ಹಕ್ಕುಗಳೇನಂದರೆ ಅಗತ್ಯವುಳ್ಳವರನ್ನು ಸಹಾಯ ಮಾಡುವುದು, ಯಾರನ್ನು ದುಖಃ ಅಥವಾ ಸಂಕಷ್ಟ ಕೊಡಬಾರದು, ರಾಷ್ಟ್ರದಲ್ಲಿ ಕಿಡಿಗೇಡಿತನ ಹುಡ್ಡಿಸಬಾರದು, ಸ್ವದೇಶ ಪ್ರೇಮ ಈಮಾನಿನ ಒಂದು ಭಾಗವಾಗಿದೆ ಹಾಗೂ ಸ್ವದೇಶದ ಅಭಿವೃದ್ಧಿಗಾಗಿ ಶ್ರಮವಹಿಸುವುದಾಗಿದೆ.

ಈ ಪತ್ರಿಕೆಯು 100 ವರ್ಷಕ್ಕಿಂತ ಹೆಚ್ಚು ಕಾಲಾವಧಿಯಿಂದ ಈ ಉದ್ದೇಶದ ಪ್ರಕಾರ ಜಮಾಅತ್ತಿನ ಸದಸ್ಯರ ಶೈಕ್ಷಣಿಕವಾಗಿ ತರಬೇತಿ ಮಾಡುತ್ತಾ ಬಂದಿದೆ. ಅದರ ಪ್ರತಿ ಫಲವಾಗಿ ನಮಗೆ ಅಲ್ಲಾಹನ ಅನುಗ್ರಹದಿಂದ ಶಾಂತಿಯುತ ಪಂಗಡ ಎಂದು ವಿಶ್ವದಾದ್ಯಂತ ಪರಿಗಣಿಸುತ್ತಾರೆ.

ಅಕ್ಟೋಬರ್ 1902ರಲ್ಲಿ ಜಾಗತಿಕ ಅಹ್ಮದಿಯ ಮಯಸ್ಲಿಮ್ ಜಮಾಅತ್ತಿನ ಸಂಸ್ಥಾಪಕರಾದ ಹಝ್ರತ್ ಮಿರ್ಝ ಗುಲಾಮ್ ಅಹ್ಮದ್ ಖದಿಯಾನಿ ಅವರು ಈ ಪತರಿಕೆಯನ್ನು ಉರ್ದು ಭಾಷೆಯಲ್ಲಿ ಉದ್ಘಾಟಿಸಿದರು. ಇಂದು ಈ ಪತ್ರಿಕೆಯು ಭಾರತದ ಏಳು ಭಾಷೆಗಳಲ್ಲಿ ಭಾಷಾಂತರವಾಗಿ ಪ್ರಕಟಗೊಳ್ಳುತ್ತಿದೆ. ಉರ್ದುವನ್ನು ಬಿಟ್ಟು ಹಿಂದಿ, ತಮಿಳು, ತೆಲುಗು, ಬಾಂಗ್ಲ, ಉಡಿಯಾ, ಮಳಯಾಳಂ ಹಾಗೂ ಕನ್ನಡ. ಕಳೆದ 1.5 ವರ್ಷದಿಂದ ಕನ್ನಡದಲ್ಲಿಯು ಈ ಪತ್ರಿಕೆಯು ಪ್ರಕಟಗೊಳ್ಳುತ್ತಿರಿವುದು ಬಹಳ ಸಂತೋಷದ ವಿಷಯವಾಗಿದೆ. ಈ ಪತ್ರಿಕೆಯು ಧಾರ್ಮಿಕ ಪತ್ರಿಕೆ ಆದ್ದರಿಂದ ರಾಜಕೀಯ ನಿಟ್ಟಿನಲ್ಲಿ ಯಾವ ಸಂಬಂಧವೂ ಇಲ್ಲ.

ಈ ಪತ್ರಿಕೆಯಲ್ಲಿ ಜಾಗತಿಕ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ಪಂಚಮ ಖಲೀಫ ಹಝ್ರತ್ ಮಿರ್ಝ ಮಸ್‌ರೂರ್ ಅಹ್ಮದ್‌ರವರ ಶುಕ್ರವಾರದ ಪ್ರವಚನ (ಖುತ್‌ಬ ಜುಮುಅ) ವಿಶೇಶವಾಗಿರುತ್ತದೆ. ಆ ಖುತ್‌ಬದಲ್ಲಿ ಅವರು ಪವಿತ್ರ ಖುರ್‌ಆನ್ ಹಾಗೂ ಹದೀಸ್‌ಗಳ ಶಿಕ್ಷಣಗಳ ಪ್ರಕಾರ ತಮ್ಮ ಜಮಾಅತ್ತಿನ ಸದಸ್ಯರನ್ನು ಸಂಬೋಧಿಸುತ್ತಾರೆ. ನಿಮ್ಮ ಈ ಪ್ರವಚನವೂ ಎಂ.ಟಿ.ಎ ಎಂಬ ಚ್ಯಾನಲ್‌ನಲ್ಲಿ ಪ್ರತಿ ಶುಕ್ರವಾರ ನೇರವಾಗಿ ಪ್ರಸಾರವಾಗುತ್ತದೆ. ಅದನ್ನು ಇಡೀ ವಿಶ್ವದಾದ್ಯಂತ ಕೇಳ ಹಾಗೂ ನೋಡಬಹುದು. ತದನಂತರ ಈ ಖುತ್‌ಬ ಪತ್ರಿಕೆಯಲ್ಲಿ ಪಕಟಗೊಳ್ಳುತ್ತದೆ. ಖಲೀಫರ ಖುತ್‌ಬ ಈ ಪತ್ರಿಕೆಯ ಪ್ರಾಣವಾಗಿದೆ.

ಮಿರ್ಝ ಮಸ್‌ರೂರ್ ಅಹ್ಮದ್ ವಾಗ್ದಾತ್ತ ಮಹೀಹರ 5ನೇ ಖಲೀಫರಾಗಿದ್ದಾರೆ ಅವರು ಲಂಡನ್‌ನಲ್ಲಿ ವಾಸವಾಗಿದ್ದಾರೆ. ಜಾಗತಿಕ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ಇಮಾಮರಾಗಿದ್ದಾರೆ. ಅದಲ್ಲದೆ ಈ ಪತ್ರಿಕೆಯಲ್ಲಿ ಖಲೀಫರ ಪ್ರವಾಸಗಳ ವರದಿಗಳು ಪ್ರಕಟಗೊಳ್ಳುತ್ತದೆ ಅವೂ ಬಹಳ ಕುತೂಹಲಕಾರಿ ಆಗಿರುತ್ತದೆ. ಈ ವರದಿಗಳು ಜಮಾಅತ್ತಿನ ಸದಸ್ಯರ ಜ್ಞಾನ ಅಭಿವೃದ್ಧಿಯಲ್ಲಿ ವಿಶೇಶವಾಗಿ ಕಾರ್ಯ ನಿರ್ವಹಿಸುತ್ತದೆ. ಇದಲ್ಲದೆ ಜಮಾಅತ್ತಿನ ಕಾರ್ಯಗಳ ವರದಿಗಳು ಮತ್ತು ಆಧ್ಯಾತ್ಮಿಕ ಹಾಗೂ ಶೈಕ್ಷಣಿಕ ಅಭಿಮೃದ್ಧಿಸುವಂತಹ ಜ್ಞಾನ ಭರಿತ ಲೇಖನಗಳು ಪ್ರಕಟಗೊಳ್ಳುತ್ತದೆ.

ಹೀಗಾಗಿ ಈ ಪತ್ರಿಕೆಯು ಮಹತ್ವಪೂರ್ಣವಾದ ಪತ್ರಿಕೆ ಆಗಿದೆ.

ಎಲ್ಲಾ ಓದುಗರಲ್ಲಿ ಈ ಪತ್ರಿಕೆಯನ್ನು ಕೊಂಡುಕೊಳ್ಳಬೇಕಾಗಿ ವಿನಂತಿಸಲಾಗುತ್ತಿದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: +91 99153 79255, 9902678609, 9866358609 (ವ್ಯವಸ್ಥಾಪಕರು)

## ವಿಶೇಶ ಸೂಚನೆ

**"ಬದರ್" ವಾರಪತ್ರಿಕೆಯ ಚಂದಾದರರಲ್ಲಿ ತಮ್ಮ ಬಾಕಿ ಇರುವ ವಾರ್ಷಿಕ ಶುಲ್ಕವನ್ನು ಶೀಘ್ರವೇ ಪಾವತಿಸಲು ವಿನಂತಿ.**
**ಮೊಬೈಲ್ ಸಂಖ್ಯೆ: 9866358609 (ವ್ಯವಸ್ಥಾಪಕರು)**

**ಇನ್ಸಾನಿಯತ್ ಝಿಂದಾಬಾದ್, ಮಾನವೀಯತೆ ಚಿರಕಾಲ ಬಾಳಲಿ**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.03, Thursday, 28 April 2022, Issue No. 17

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.575/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

### ಮುಸ್ಲಿಮೇತರ ಜರ್ಮನ್‌ನ ಪರಿಚಯ ಭಾಷಣ

ಅಮೀರ್ ಸಾಹಿಬ್ ಜರ್ಮನಿಯರ ಪ್ರಸ್ತಾವಿತ ಭಾಷಣದ ನಂತರ ಉಪಮೇಯರ್ Claus Dalinghaus ತಮ್ಮ ಪರಿಚಯ ಭಾಷಣ ಪ್ರಸ್ತುತಪಡಿಸಿದರು.

ಗೌರವಾನ್ವಿತರಾದ ಖಲೀಫತುಲ್ ಮಸೀಹ್! ಈ ಕಾರ್ಯಕ್ರಮಕ್ಕೆ ನನ್ನನ್ನು ಆಹ್ವಾನಿಸಿದಕ್ಕೆ ನಿಮಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ನಮ್ಮ ನಗರದ ಸುಂದರತೆಯ ಬಗ್ಗೆ ವಿವರಣೆ ನೀಡಿದ ಬಗ್ಗೆಯೂ ಕೃತಜ್ಞನಾಗಿದ್ದೇನೆ. ಮಸೀದಿಯ ಉದ್ಘಾಟನೆ ನಿಮಗೂ, ನನಗೂ ಅತ್ಯಂತ ವೈಶಿಷ್ಟ್ಯಪೂರ್ಣ ವಿಷಯವಾಗಿದೆ. ಈ ಸಂದರ್ಭದಲ್ಲಿ ಕಾರ್ಯಾಗಾರಿ ಸಮಿತಿಗೆ ಶುಭಾಶಯಗಳನ್ನು ಹೇಳುವೆನು.

ಅಹ್ಮದಿಯಾ ಮುಸ್ಲಿಂ ಜಮಾಅತ್ vechta ಗೆ ಈ ಮಸೀದಿ ವಿಶೇಷ ಮಹತ್ವ ಹೊಂದಿದೆ. ಇದು ಕೇವಲ ಭೇಟಿಯಾಗುವ ಸ್ಥಳವಲ್ಲಿ ಬದಲು ಇಸ್ಲಾಂ ಧರ್ಮವು ಇಲ್ಲಿಯ ಇತರ ಧರ್ಮದಂತೆಯೇ ಈ ನಗರದ ಒಂದು ಅಂಗವಾಗಿದೆ.

ಅವರು ಹೇಳಿದರು. ಇಲ್ಲಿ ಮಸೀದಿಯ ನಿರ್ಮಾಣದಿಂದಾಗಿ Vechta ನಗರ ಜಮಾಅತಿನ ಜನ್ಮಸ್ಥಾನ ಆಗಿಬಿಟ್ಟಿದೆ. ಹೀಗೆ ಓರ್ವ ಮನುಷ್ಯನ ಜನ್ಮಸ್ಥಾನವಾಗಿದೆ ಎಂದರೆ ಅದು ಏಕತೆಯ ಸಂದೇಶವಾಗುತ್ತದೆ. ಅವರ ತಾತ್ಪರ್ಯವೇನೆಂದರೆ ಎಲ್ಲರೂ ಪರಸ್ಪರ ಸಹಕಾರದಿಂದಿರಬೇಕು. ಮತ್ತು ಯಾರನ್ನು ದ್ವೇಷಿಸಬಾರದು.

ಅಹ್ಮದಿಯಾ ಜಮಾಅತಿನ ಗುಣವೇನೆಂದರೆ ಅದು ನಿಜವಾಗಿಯೂ ಕಾರ್ಯರೂಪಕ್ಕೆ ತಂದೇ ತೀರುತ್ತದೆ. ಮತ್ತು ಎಲ್ಲರೊಂದಿಗೆ ಪ್ರೀತಿಯಿಂದ ವ್ಯವಹರಿಸುತ್ತದೆ ಗೌರವಾನ್ವಿತ ಖಲೀಫತುಲ್ ಮಸೀಹ್! ಕುಶಲವಾಗಿ ಮರಳುವಂತಾಗಲಿ ಇನ್ನೊಮ್ಮೆ ಇಲ್ಲಿಗೆ ಬರುವಂತಾಗಲಿ. ಇದೀಗ ನಾನು ಕೊನೆಯಲ್ಲಿ ಖಲೀಫತುಲ್ ಮಸೀಹ್‌ರೆ ಒಂದು ಗೌರವ ಪ್ರಸ್ತುತಪಡಿಸಬಯಸುತ್ತೇನೆ. ಹಾಗೆ ಮೇಯರ್ ಅವರು vecha ನಗರ ಪರವಾಗಿ ಒಂದು ಸೋವಿನಿಯರ್ (ಸ್ಮಾರಕ ಗ್ರಂಥ) ಪ್ರಸ್ತುತಪಡಿಸಿದರು.

ಮೇಯರ್‌ರವರ ಭಾಷಣದ ನಂತರ ರಾಜ್ಯ ಅಸೆಂಬ್ಲಿಯ ಸದಸ್ಯರಾದ Mr. Stephan siemen ತಮ್ಮ ಪರಿಚಯ ಭಾಷಣ ಮಾಡಿದರು.

ಅವರು ತಮ್ಮ ಭಾಷಣದಲ್ಲಿ ಹೇಳಿದರು. ಗೌರವಾನ್ವಿತ ಖಲೀಫರೆ! ಪ್ರಪ್ರಥಮವಾಗಿ ನೀವು ಮಸೀದಿಯ ಉದ್ಘಾಟನಾ ಸಮಾರಂಭಕ್ಕೆ ನನ್ನನ್ನು ಅಹ್ವಾನಿಸಿದಕ್ಕೆ ನಿಮಗೆ ಕೃತಜ್ಞತೆಯನ್ನು ಅರ್ಪಿಸುತ್ತೇನೆ. ನಾನು ರಾಜ್ಯ ಅಸೆಂಬ್ಲಿಯ ಸದಸ್ಯನಾಗಿದ್ದೇನೆ. ಜಮಾಅತಿನ ಕಾರ್ಯಕ್ರಮಗಳಲ್ಲಿ ಭಾಗವಹಿಸಿರುತ್ತೇನೆ. ಇಂದು vechta ದಲ್ಲಿ ನಿಮ್ಮ ಕಾರ್ಯಗಳ ಫಲ ಮಸೀದಿಯ ರೂಪದಲ್ಲಿ ನಿಮಗೆ ದೊರೆತಿದೆ. ನೀವು ತಮ್ಮ ಧರ್ಮಾನುಸಾರ ತಮ್ಮ ಆರಾಧನೆಗಳನ್ನು ನೆರವೇರಿಸಿಕೊಳ್ಳಬಹುದಾಗಿದೆ.

ಅವರು ಹೇಳಿದರು. ನೀವು ತಮ್ಮ ಆಹ್ವಾನ ಪತ್ರದಲ್ಲಿ ಶಾಂತಿ, ಪ್ರೇಮ, ಹೃದಯ ವೈಶಾಲ್ಯವುಳ್ಳ ಮಾತುಕತೆ, ಸಂಭಾಷಣೆ ಮತ್ತು ಮಾನವ ಸೇವೆ ಸಹಕಾರದ ಕೊಡಗೆಯನ್ನು ನೀಡಿದ್ದೀರಿ. ಈ ನೆಲೆಯಲಿ ನಾನು ಹೇಳಬಯಸುವುದೇನೆಂದರೆ ಈ ನಗರದಲ್ಲಿ ಹಲವು ಧರ್ಮಗಳಿವೆ. ಪ್ರೋಟೆಸ್ಟೆಂಟ್, ಕೆಥೋಲಿಕ್ ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಾರೆ. ಇತ್ತೀಚೆಗೆ ವಿವಿಧ ಧರ್ಮಗಳಲ್ಲಿ ಹಲವು ಸಮಸ್ಯೆಗಳಿವೆ. ಅಲ್ಲದೇ ಸಮಾನತೆ ಹೊಂದಿರುವ ಧರ್ಮಗಳಲ್ಲಿ ಹೆಚ್ಚು ಸಮಸ್ಯೆಗಳಿರುತ್ತಿವೆ.

ಪರಸ್ಪರ ಕೂಡಿ ಇರುವುದು ಬಹು ಅವಶ್ಯವಾಗಿದೆ. ಎಲ್ಲಾ ಧರ್ಮದವರು ತಮ್ಮ ತಮ್ಮ ರೀತಿಯಲ್ಲಿ ಜೀವಿಸಬಹುದು. ಪರಸ್ಪರ ಪ್ರೀತಿಯಿಂದ ಬಾಳಬೇಕು. ಜರ್ಮನಿಯಲ್ಲಿ ಹಿಂದೆ ಬಹಳ ಯುದ್ಧಗಳಾಗಿವೆ. ಆ ಯುದ್ಧಗಳ ಕಾಲ ಮತ್ತೆ ಬಾರದಿರಲಿಕ್ಕಾಗಿ ನಾವು ಪ್ರಯತ್ನಿಸಬೇಕು. ಕೊನೆಯಲ್ಲಿ ನನ್ನನ್ನು ಆಹ್ವಾನಿಸಿದಕ್ಕೆ ಮತ್ತೊಮ್ಮೆ ಕೃತಜ್ಞತೆಯನ್ನು ಅರ್ಪಿಸಬಯಸುತ್ತೇನೆ.

### ಮಸ್ಜಿದ್ ಬೈತುಲ್ ಖಾದರ್ ಉದ್ಘಾಟನಾ ಸಮಾರಂಭದ ಪ್ರಯುಕ್ತ

### ಹುರ್ಝೂರರ ಭಾಷಣ

ಸಂಸತ್ ಸದಸ್ಯರ ಭಾಷಣದ ನಂತರ ಹುರ್ಝೂರ್ ಅನ್ವರ್(ಅಬಿಅ) 7 ಗಂಟೆ 10 ನಿಮಿಷಕ್ಕೆ ಈ ಸಮಾರಂಭದ ಕುರಿತು ಮಾತನಾಡಿದರು. ತಶಹ್ಹುದ್, ತಾಊರ್‍ಝ್ ಮತ್ತು ತಸ್ಮೀಯಾದ ನಂತರ ಹುರ್ಝೂರ್ ಹೇಳಿದರು. ಎಲ್ಲಾ ಆದರಣಿಯ ಅತಿಥಿಯರಿಗೆ ಅಸ್ಸಲಾಮು ಅಲೈಕುಂ!

ಮೊದಲಿಗೆ ನಾನು ಎಲ್ಲಾ ಅತಿಥಿಗಳಿಗೆ ಧನ್ಯವಾದಗಳನ್ನು ಅರ್ಪಿಸ ಬಯಸುತ್ತೇನೆ. ಒಂದು ಜಮಾಅತಿನ ಧಾರ್ಮಿಕ ಸಮಾರಂಭ ಹಾಗೂ ಅದರ ಆರಾಧನಾ ಸ್ಥಳದ ಉದ್ಘಾಟನೆಗೆ ತಾವು ನಮ್ಮ ಈ ಸಮಾರಂಭಕ್ಕೆ ಆಗಮಿಸಿದ್ದೀರಿ. ಇದು ನಿಮ್ಮ ಹೃದಯ ವೈಶಾಲ್ಯ ಹಾಗೂ ಸದ್ಬುದ್ಧಿಯನ್ನು ಸೂಚಿಸುತ್ತದೆ. ನೀವು ಅಹ್ಮದಿಯಾ ಪರವಾಗಿಯೂ ಈ ಸಮಾರಂಭಕ್ಕೆ ಬಂದಿದ್ದು ಮಾತ್ರವಲ್ಲ ನನ್ನ ಪ್ರಯಾಣ ತಡವಾದ್ದರಿಂದ ಕಾರ್ಯಕ್ರಮ ತಡವಾದ್ದರಿಂದ ನಿಮಗೆ ಕಾಯಬೇಕಾಯಿತು. ಅದನ್ನರಿತು ಇನ್ನಷ್ಟು ಕೃತಜ್ಞತೆಯ ಭಾವ ನನ್ನಲ್ಲಿ ಮೂಡುತ್ತದೆ. ನಾವು ಒಂದು ದೀರ್ಘವಾದ ಪ್ರವಾಸ ಮಾಡಿ ಬರುತ್ತಿರುವೆವು. ಇಲ್ಲಿಂದ ಎರಡೂವರೆ ನೂರು ಕಿ.ಮೀ. ನಷ್ಟು ದೂರದಲ್ಲಿ ಇಲ್ಲಿಗೆ ಬರುವ ರಸ್ತೆಯಲ್ಲಿ ಒಂದು ನಗರವಿದೆ. ಅಲ್ಲಿಯ ಒಂದು ಮಸೀದಿಯ ಅಡಿಗಲ್ಲು ಸಮಾರಂಭವಿತ್ತು. ಹೀಗೆ ಪ್ರವಾಸ ದೀರ್ಘವೂ ಆಯಿತು. ರಸ್ತೆಯಲ್ಲಿ ಕೆಲವು Traffic ಅಡಚಣೆಯೂ ಬಂದವು. ಹೀಗೆ ಸಮಾರಂಭವಿದ್ದರಿಂದ ತಡ ಆಗಿದೆ. ಆದುದರಿಂದ ನಾನು ನಿಮ್ಮೆಲ್ಲರಿಂದ ಕ್ಷಮೆ ಯಾಚಿಸುತ್ತೇನೆ. ತಾವು ಒಂದೂವರೆ ತಾಸು ಕಾದಿದ್ದೀರಿ. ಇದು ನಿಜಕ್ಕೂ ತುಂಬಾ ದೊಡ್ಡ ವಿಷಯವಾಗಿದೆ.

ಹುರ್ಝೂರ್ ಅನ್ವರ್ ಹೇಳಿದರು. ನನ್ನ ಕೃತಜ್ಞತೆಗೆ ಇನ್ನೊಂದು ಕಾರಣ ನಾನು ಯಾವ ಪ್ರವಾದಿಯವರನ್ನು ನಂಬುತ್ತೇನೋ ಅವರ ನುಡಿಯಾಗಿದೆ. ಯಾರು ಜನರಿಗೆ ಕೃತಜ್ಞರಾಗುವುದಿಲ್ಲವೋ ಅವರು ದೇವನೊಂದಿಗೆ ಕೃತಜ್ಞರಾಗಿರಲು ಸಾಧ್ಯವಿಲ್ಲ. ಅಂದರೆ ಈ ಕೃತಜ್ಞತೆ ನನ್ನ ಆರಾಧನೆಯ ಒಂದು ಭಾಗವಾಗಿದೆ. ಇಲ್ಲದಿದ್ದರೆ ನನಗೆ ಮಸೀದಿಗೆ ಹೋಗಿ ಆರಾಧಿಸುವುದರಿಂದ ಯಾವ ಪ್ರಯೋಜನವೂ ಇಲ್ಲ. ಹೀಗೆ ಆದುದರಿಂದ ನಾನು ಮೊಟ್ಟ ಮೊದಲು ನಿಮಗೆ ಕೃತಜ್ಞತೆ ಸಲ್ಲಿಸುತ್ತೇನೆ. ನೀವು ಇಲ್ಲಿ ಆಗಮಿಸಿದ್ದೀರಿ. ಇಷ್ಟು ದೀರ್ಘ ಸಮಯವಾದುದ್ದಕ್ಕೆ ಕ್ಷಮೆಯೂ ಕೋರುತ್ತೇನೆ.

ಹುರ್ಝೂರ್ ಅನ್ವರ್ ನುಡಿದರು. ನಮ್ಮ ದೃಷ್ಟಿಯಲ್ಲಿ ಮಸೀದಿಯು ಅಲ್ಲಾಹನ ಮನೆಯಾಗಿದೆ ಮತ್ತು ಎಲ್ಲಾ ಆರಾಧನೆ ಸ್ಥಾನಗಳು ಅಲ್ಲಾಹನ ಮನೆಗಳಾಗಿರುತ್ತವೆ. ಆದುದರಿಂದಲೇ ಮಕ್ಕದ ಅವಿಶ್ವಾಸಿಗಳು ರಸೂಲುಲ್ಲಾಹ್(ಸ) ಹಿಜ್ರತ್(ವಲಸೆ) ಆದ ನಂತರ ಮದೀನಕ್ಕೆ ಹೋದಾಗ ಅವರ ಮೇಲೆ ಆಕ್ರಮಣ ಮಾಡಲಾಯಿತು. ಆ ಸಮಯ ಮುಸಲ್ಮಾನರ ಬಳಿ ಯಾವ ಯುದ್ಧ ಸಾಮಗ್ರಿಗಳು ಇರಲಿಲ್ಲ. ಆ ಸಮಯ ಮುಸಲ್ಮಾನರಿಗೆ ತಾಳ್ಮೆ ವಹಿಸುವ ಆಜ್ಞೆಯಾಯಿತು. ಬಹಳಷ್ಟು ತಾಳ್ಮೆವಹಿಸಿದರು. 13 ವರ್ಷಗಳವರೆಗೆ ತಾಳ್ಮೆವಹಿಸಿದರು. ಈ ಶತ್ರುಗಳ ಕೈ ತಡಯಬೇಕಾಗಿದೆ. ಮತ್ತು ಕಠಿಣವಾಗಿ ವರ್ತಿಸಿ ಎಂದು ಹೇಳಿದರು. ಕಠಿಣವಾಗಿ ಏಕೆ ವರ್ತಿಸಬೇಕೆಂದರೆ–ಇಂದು ಅವರನ್ನು ಕಠಿಣವಾಗಿ ವರ್ತಿಸಿಲ್ಲ ಎಂದಾದರೆ, ಅವರು ಧರ್ಮವಿರೋಧಿಗಳಾಗಿದ್ದಾರೆ. ಅವರಿಗೆ ಆರಾಧನಾ ಸ್ಥಳಗಳು ಬೇಕಾಗಿಲ್ಲ. ಅವರು ಯಾವ ಧರ್ಮದಿಂದಲೂ ಸಂಬಂಧ ಬಯಸುವವರಲ್ಲ. ಅವರು ಎಲ್ಲಾ ಆರಾಧನಾ ಮಂದಿರಗಳನ್ನು ಅಳಿಸಿಹಾಕುವರು, ಆದುದರಿಂದ ಪವಿತ್ರ ಖುರ್‌ಆನ್‌ನಲ್ಲಿ ಬಹು ಸ್ಪಷ್ಟವಾಗಿ ಬರೆಯಲಾಗಿದೆ. ಅವರ ಕೈಗಳನ್ನು ತಡೆಯದಿದ್ದರೆ ಯಾವ ಚರ್ಚ್ ಉಳಿಯಲಿಕ್ಕಿಲ್ಲ, ಯಾವ ಸೇನಗಾಗ್ ಉಳಿಯಲಿಕ್ಕಿಲ್ಲ. ಯಾವ ಆರಾಧನೆ ಮಂದಿರವು ಉಳಿಯಲಿಕ್ಕಿಲ್ಲ, ಮಸೀದಿಯೂ ಸಹ ಉಳಿಯಲಿಕ್ಕಿಲ್ಲ. ಅಂದರೆ ಮುಸಲ್ಮಾನರು ಕೇವಲ ಮಸೀದಿಗಳನ್ನು ರಕ್ಷಿಸಿಲ್ಲ. ಬದಲು ಎಲ್ಲಾ ಆರಾಧನಾ ಮಂದಿರಗಳನ್ನು ರಕ್ಷಿಸಬೇಕಾಗಿದೆ. ಚರ್ಚಿನ ಪಾವಿತ್ರ್ಯತೆಯನ್ನು ರಕ್ಷಿಸಬೇಕಾಗಿದೆ, ಸೇನಾಗಾರರನ್ನೂ ರಕ್ಷಿಸಬೇಕಾಗಿದೆ. ಮತ್ತು ಇತರ ಮಂದಿರಗಳು ಹಾಗೂ ಆರಾಧನಾ ಸ್ಥಳಗಳನ್ನು ರಕ್ಷಿಸಬೇಕಾಗಿದೆ.

**(ಮುಂದುವರಿಯುವುದು)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.